ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 2, May-June 2024, Pp. 125-139
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬೆಟ್ಟಕುರುಬ ಸಮುದಾಯದ ಸಾಮಾಜಿಕ ವ್ಯವಸ್ಥೆಯಲ್ಲಿ ಪುನರ್ವಸತಿಕರಣದ ಪ್ರಭಾವ

**ಕಿರುಮಿದಿ ಎಂ.ಎಂ[1] ಮತ್ತು ಡಾ. ಎಂ.ಮೀರ[2]**

[1]ಸಂಶೋಧನಾ ವಿದ್ಯಾರ್ಥಿ, ಮಹಿಳಾ ಅಧ್ಯಯನ ಕೇಂದ್ರ, ಮೈಸೂರು ವಿವಿ, ಮಾನಸಗಂಗೋತ್ರಿ, ಮೈಸೂರು.

[2] ಸಹ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮೈಸೂರು ವಿವಿ, ಮಾನಸಗಂಗೋತ್ರಿ, ಮೈಸೂರು.

**Abstract:**

*ಬೆಟ್ಟಕುರುಬ ಸಮುದಾಯವು ಪ್ರಮುಖ ಆದಿವಾಸಿ (ಬುಡಕಟ್ಟು) ಸಮುದಾಯಗಳಲ್ಲಿ ಒಂದಾಗಿದೆ. ಈ ಸಮುದಾಯದ ಜನರು ಹೆಚ್ಚಾಗಿ ಮೈಸೂರು, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳಲ್ಲಿ ಕಂಡು ಬರುತ್ತಾರೆ. ಈ ಲೇಖನದಲ್ಲಿ ಬೆಟ್ಟಕುರುಬ ಸಮುದಾಯದ ಪುನರ್ವಸತಿಕರಣಕ್ಕೆ ಯಾವ ಜಿಲ್ಲೆಗಳು ಒಳಪಟ್ಟಿವೆ, ಅಲ್ಲಿ ಬೆಟ್ಟಕುರುಬ ಸಮುದಾಯದ ಸಾಮಾಜಿಕ ವ್ಯವಸ್ಥೆ, ಆಹಾರ ಪದ್ಧತಿಗಳು, ಜೀವನಶೈಲಿ, ವೇಷಭೂಷಣ, ಸಾಂಸ್ಕೃತಿಕ ಆಚರಣೆಗಳು, ಶೈಕ್ಷಣಿಕ ಮಟ್ಟ, ಹೀಗೆ ಮೊದಲಾದ ಅಂಶಗಳನ್ನು ಒಳಗೊಂಡಿರುವುದರ ಜೊತೆಗೆ ಪುನರ್ವಸತಿಕರಣವು ಇವರ ಮೇಲೆ ಹೇಗೆ ಪರಿಣಾಮ ಬೀರಿವೆ? ಪುನರ್ವಸತಿಕರಣದಿಂದ ಸರ್ಕಾರ ಒದಗಿಸಿಕೊಟ್ಟಿರುವ ಸೌಲಭ್ಯಗಳಾವುವು? ಅವುಗಳ ಸದುಪಯೋಗವು ಈ ಸಮುದಾಯದ ಜನರಿಗೆ ಎಷ್ಟರ ಮಟ್ಟಿಗೆ ತಲುಪಿವೆ ಇನ್ನು ಮೊದಲಾದ ವಿಷಯಗಳ ಕುರಿತಾಗಿದೆ. ಸಂದರ್ಶನ ವಿಧಾನವನ್ನು ಬಳಸಿ ಬೆಟ್ಟಕುರುಬ ಸಮುದಾಯದ 50 ಮಹಿಳೆಯರು ಮತ್ತು ಪುರುಷರೊಂದಿಗೆ ಸಂದರ್ಶನವನ್ನು ನಡೆಸಿ ಅವರಿಂದ ಮಾಹಿತಿಯನ್ನು ಕಲೆ ಹಾಕಲಾಗಿದೆ.*

**Keywords:** *ಬುಡಕಟ್ಟು ಸಮುದಾಯ, ಬೆಟ್ಟಕುರುಬ ಸಮುದಾಯ, ಸಾಮಾಜಿಕ ವ್ಯವಸ್ಥೆ, ಪುನರ್ವಸತಿಕರಣ*

## ಪೀಠಿಕೆ

ಭಾರತದಲ್ಲಿ ‘ಆದಿವಾಸಿ’ ಎಂಬ ಪದವನ್ನು ಅತ್ಯಂತ ಪ್ರಾಚೀನ ಹಾಗೂ ಮೊದಲ(ಮೂಲ) ನಿವಾಸಿಗಳು ಎಂಬುದನ್ನು ಸೂಚಿಸುವುದಕ್ಕೆ ಬಳಸಲಾಗಿದೆ. ಬುಡಕಟ್ಟು ಜನರು ಹಲವಾರು ಆಡುಭಾಷೆಗಳನ್ನು ಬಳಸುತ್ತಾರೆ. ಅನೇಕ ಜನರು ತಮ್ಮ ಮಾತೃಭಾಷೆ, ಸ್ಥಳೀಯ ಭಾಷೆ ಹಾಗೂ ಬೇರೊಂದು ಉಪಭಾಷೆ ಹೀಗೆ ಹೆಚ್ಚೆಚ್ಚು ಭಾಷೆಗಳನ್ನು ಬಲ್ಲವರಾಗಿದ್ದಾರೆ. ಬೆಟ್ಟಕುರುಬ ಸಮುದಾಯವು ಕರ್ನಾಟಕದಲ್ಲಿ ಮೈಸೂರು, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳಲ್ಲಿ ಕಂಡು ಬರುತ್ತಾರೆ. ಇವರು ಇಂದು ಕಾಡಂಚಿನ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದು, ಇವರು ವಾಸ ಮಾಡುವ ಪ್ರದೇಶಗಳನ್ನು ‘ಹಾಡಿ/ಕಾಲೋನಿ’ಗಳೆಂದು ಕರೆಯುತ್ತಾರೆ. ಬೆಟ್ಟಕುರುಬರು ತಮ್ಮ ಭಾಷೆಯಲ್ಲಿ ಅಂಬಾಲ ಅಥವಾ ಭಾವಡಿಯನ್ನು ಅಂಬಾಲ್ಫ್, ತೈವಗುರಿಯ್ಫ್, ದೈವಲೆ ಎಂದು ಕರೆಯುತ್ತಾರೆ. ಇವರು ಮಾಂಸಹಾರಿಗಳಾಗಿದ್ದು, ಗೆಡ್ಡೆಗೆಣಸು, ಸೊಪ್ಪು ತರಕಾರಿಗಳ ಸೇವನೆ ಹಾಗೂ ರಾಗಿಮುದ್ದೆ, ಅನ್ನ ಸೇವನೆಯನ್ನು ಮಾಡುತ್ತಾರೆ. 2011 ಜಿಲ್ಲಾವಾರು ಜನಗಣತಿಯ ಪಟ್ಟಿಯಲ್ಲಿ ಮೈಸೂರು ಜಿಲ್ಲೆಯಲ್ಲಿ 945 ಮಹಿಳೆಯರು, 914 ಪುರುಷರು

***Please cite this article as:*** ಕಿರುಮಿದಿ ಎಂ.ಎಂ ಮತ್ತು ಎಂ. ಮೀರ. (2024). ಬೆಟ್ಟಕುರುಬ ಸಮುದಾಯದ ಸಾಮಾಜಿಕ ವ್ಯವಸ್ಥೆಯಲ್ಲಿ ಪುನರ್ವಸತಿಕರಣದ ಪ್ರಭಾವ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 3(2), 125–139

ಸೇರಿದಂತೆ ಒಟ್ಟು 1859 ಬೆಟ್ಟಕುರುಬ ಸಮುದಾಯದ ಜನರು ಕಂಡು ಬರುತ್ತಾರೆ. ಚಾಮರಾಜನಗರ ಜಿಲ್ಲೆಯಲ್ಲಿ ಮಹಿಳೆಯರು 178, ಪುರುಷರು 162 ಒಟ್ಟು 340 ಹಾಗೂ ಕೊಡಗು ಜಿಲ್ಲೆಯಲ್ಲಿ ಮಹಿಳೆಯರು 98, ಪುರುಷರು 95 ಒಟ್ಟು 193 ಇರುವುದನ್ನು ಕಾಣಬಹುದಾಗಿದೆ.

**ಬೆಟ್ಟಕುರುಬರ ಉಗಮದ ಬಗ್ಗೆ ಪ್ರಚಲಿತವಾಗಿರುವ ಕತೆ**

ಬೆಟ್ಟಕುರುಬರು ತಮಿಳುನಾಡಿನ ನೀಲಗಿರಿ ಎಂಬ ನಿರ್ದಿಮಲೆಯ ಮೇಲೆ ಆದಿಮಾನವರಾಗಿ, ನೇರ್ದಜ್ಜನ್, ಸಣ್‌ಬೇಲ್ ಅಜ್ಜ, ಪಟೇಲ್‌ಕಾರ್ ಅಜ್ಜ ಎಂಬುವವರು ದೊಡ್ಡವರಾಗಿ ಬೆಳೆದು ಪ್ರಪಂಚದ ಬಗ್ಗೆ ಅರಿವು ಬರುತ್ತಿದ್ದಂತೆ ಒಂದು ದಿನ ತಾಳುಬೆಟ್ಟದ ಕೆಳಗಡೆ ಗಂಜಿಗಡ ಎಂಬಲ್ಲಿ ಬಂದು ಎಲ್ಲರು ಸೇರಿ ಆಲೋಚನೆಯನ್ನು ಮಾಡುತ್ತಾರೆ. ಅದೇನೆಂದರೆ, 'ನಾವು ಹೀಗಿದ್ದರೆ ಸಾಲದು ನಮ್ಮ ಜೀವನೋಪಾಯವನ್ನು ನಡೆಸಲು ಏನಾದರೂ ವ್ಯವಸ್ಥೆ ಮಾಡಿಕೊಳ್ಳಬೇಕು.' ಈ ರೀತಿ ಯೋಚನೆ ಮಾಡಿದ ನಂತರ ಒಬ್ಬೊಬ್ಬರು ಒಂದೊಂದು ಕೆಲಸವನ್ನು ಮಾಡಲು ತೀರ್ಮಾನಿಸುತ್ತಾರೆ. ಮೊದಲು ಅಡುಗೆ ಕೆಲಸವನ್ನು ಮಾಡಲು ಪ್ರಾರಂಭಿಸುತ್ತಾರೆ. ಮೊದಲನೆಯವರಾದ ನೇರ್ದಜ್ಜ ಒಲೆ ಮಾಡಲು ಮೂರು ಕಲ್ಲು, ಒಂದು ಮಡಕೆ ತಯಾರು ಮಾಡಿ ತರುವುದಾಗಿ, ಎರಡನೆಯವರಾದ ಸಣ್‌ಬೇಲ್ ಅಜ್ಜನು ಐದು ತರಹದ ಸೊಪ್ಪು, ಗೆಡ್ಡೆಗೆಣಸುಗಳನ್ನು ತರುವುದಾಗಿ, ಮೂರನೆಯವರಾದ ಪಟೇಲ್‌ಕಾರ್ ಅಜ್ಜನು ಏಳು ಕಟ್ಟು ಸೌದೆ ಮತ್ತು ಬೆಂಕಿ ಉತ್ಪತ್ತಿ ಮಾಡಿ ಒಲೆ ಹಚ್ಚುತ್ತಾರೆ. ಹೀಗೆ ಈ ಮೂವರು ಅಡುಗೆ ಮಾಡಿ ಊಟ ಮಾಡುತ್ತಾರೆ. ಆದಾದ ನಂತರ ಎಲ್ಲರೂ ಒಗ್ಗೂಡಿ ಒಂದು ಕಲ್ಲುಪಾರೆಯ ಮೇಲೆ ಕುಳಿತು ಮುಂದಿನ ಜಮ್ಮದ, ಕುಲದ ಬಗ್ಗೆ ಮಾತನಾಡುತ್ತಾ ಮೂರು ಒಲೆ ಕಲ್ಲು, ಮಡಿಕೆ ತಯಾರು ಮಾಡಿ ತಂದವರಾದ ನೇರ್ದಾಜ್ಜನಿಗೆ ಮೂರು ವೈಲಿ ಮಗೆ (ಜಮ್ಮ) , ಉದಾ: ವೈಲ್‌ಮಿಜಲ್‌ಮಗ್ಗೆ, ಕಲ್ಕೆರ್‌ಮಗ್ಗೆ, ನಿಮೆಲ್‌ಮಗ್ಗೆ ಎಂದು, ಅದೇ ರೀತಿ ಐದು ತರಹದ ಸೊಪ್ಪು, ಗೆಡ್ಡೆಗೆಣಸು ತಂದವರಾದ ಸಣ್‌ಬೇಲ್ ಅಜ್ಜನಿಗೆ ಐದು ವೈಲಿ ಮಗೆ (ಜಮ್ಮ) ಉದಾ: ಯಾನಲ್ ಮಗ್ಗೆ, ಬಳೆರ್ ಮಗ್ಗೆ, ಜಿರ್‌ಗಲ್ ಮಗ್ಗೆ, ಕುಪ್ಪಸ್ ಮಗ್ಗೆ, ಪಳೇರ್ ಮಗ್ಗೆ, ಹಾಗೆಯೇ ಏಳು ಕಟ್ಟು ಸೌದೆ, ಬೆಂಕಿ ಉತ್ಪತ್ತಿ ಮಾಡಿ ಒಲೆ ಹಚ್ಚಿದವರಾದ ಪಟೇಲ್‌ಕಾರಜ್ಜನಿಗೆ ಏಳು ವೈಲಿ ಮಗೆ (ಜಮ್ಮ) ಉದಾ: ಯಾರ್‌ಗ್ವಾಲ್‌ಮಗ್ಗೆ, ಪಾಂಬರ್‌ಮಗ್ಗೆ, ಅಲ್ತೇರ್‌ಮಗ್ಗೆ, ಸಾಗ್ವಾಡ್‌ಮಗ್ಗೆ, ಯರ್‌ಕ್ವಾಟ್ ಮಗ್ಗೆ, ನಾಣ್ಚಿಮಗ್ಗೆ, ಹೀಗೆ ಇವರ ಕುಲ ಜಮ್ಮಗಳನ್ನು ಹಂಚಿಕೆ ಮಾಡುತ್ತಾರೆ. ನಂತರ ಮೂರು ದಿಕ್ಕಿಗೂ ಕೂಡ ಒಬ್ಬೊಬ್ಬರು ಮುಖ ಮಾಡಿ ನಿಂತು ಹಿರಿಯವರಾದ ನೇರ್ದಜ್ಜನಿಗೆ ಮಾವನಾಗಿರುವಂತೆ ಹೇಳಿ, ಎರಡನೇಯವರಾದ ಸಣ್‌ಬೇಲ್ ಅಜ್ಜನಿಗೆ ಭಾವನಾಗಿರುವಂತೆ ಹೇಳಿ ಹಾಗೆಯೇ ಮೂರನೆಯವರಾದ ಪಟೇಲ್‌ಕಾರ್ ಅಜ್ಜನಿಗೆ ಅಳಿಯನಾಗಿರುವಂತೆ ಹೇಳಿರುತ್ತಾರೆ. ಅವರೆಲ್ಲರೂ ಯಾವುದೇ ಗೊಂದಲವಿಲ್ಲದೆ ಬೆಟ್ಟದ ಮೇಲೆ ವಾಸ ಮಾಡುತ್ತ, ತಮ್ಮ ದಿನನಿತ್ಯ ಜೀವನಕ್ಕೆ ಬೇಕಾದ ಹಣ್ಣು ಹಂಪಲು ಗೆಡ್ಡೆಗೆಣಸು, ಸೊಪ್ಪು, ಜೇನುತುಪ್ಪ, ಮಾಂಸ ಇವುಗಳನ್ನು ಆಹಾರಕ್ಕೆ ಬಳಸಿ ಜೀವನ ಸಾಗಿಸುತ್ತಿರುತ್ತಾರೆ. ನಂತರ ಇವರು ವಿವಾಹವಾಗಲೂ ತೀರ್ಮಾನಿಸಿ ಮೂರು ಜನರು ಒಂದು ಮರದ ಕೆಳಗೆ ಕುಳಿತು ತಪಸ್ಸು ಮಾಡಬೇಕಾದರೆ ಅರ್‌ಮೇಲ್‌ಲಜ್ಜಿ, ತ್ಯಾಂಬರಜ್ಜಿ ಮತ್ತು ನೈಅಜ್ಜಿಯಂದಿರು ಸೃಷ್ಟಿಯಾಗುತ್ತಾರೆ. ಆಗ ಈ ಮೂವರಲ್ಲಿ ಮೊದಲನೆಯವರು, ಮತ್ತು ಹಿರಿಯವರಾದ ನೇರ್ದಜ್ಜ, ಅರ್‌ಮೇಲಜ್ಜಿಯನ್ನು ವಿವಾಹವಾಗುತ್ತಾರೆ. ಎರಡನೆಯವರು ಸಣ್‌ಬೇಲಜ್ಜ ತ್ಯಾಂಬರಜ್ಜಿಯನ್ನು ಹಾಗೂ ಮೂರನೆಯವರಾದ ಪಟೇಲ್‌ಕಾರ್ ಅಜ್ಜ ನೈಯಜ್ಜಿಯನ್ನು ವಿವಾಹವಾಗಿ ಸಂತೋಷದಿಂದ ಜೀವನ ನಡೆಸುತ್ತಾರೆ. ನಂತರ ಇವರಿಗೆ ಮಕ್ಕಳು ಹುಟ್ಟಿದಾಗ ಅವರನ್ನು ತಮ್ಮ ತಮ್ಮ ಜಮ್ಮ, ಕುಲದವರೆಂದು ಗುರುತಿಸಿಕೊಳ್ಳುತ್ತಾರೆ. ಅವರ

ಜಮ್ಮ, ಕುಲದ ನೆನಪಿಗೆ ಮೊದಲನೇ ಗಂಡುಮಗುವಿಗೆ ಮೂಪೋಡ್ದ್ವ್ ಎಂದು, ಎರಡನೇ ಗಂಡುಮಗುವಿಗೆ ಪಗೆದೋಡ್ದ್ವ್ ಎಂದು, ಮೂರನೇ ಗಂಡು ಮಗುವಿಗೆ ಅಳ್‌ಮೋಡ್ದ್ವ್ ಎಂದು ಕರೆಯುತ್ತಾರೆ. ಹಾಗೆಯೇ ಸಾಕುವ ಮಕ್ಕಳಲ್ಲಿ ಗಂಡು ಮಕ್ಕಳಿದ್ದರೆ ಅವರನ್ನು ಕಾಟ್ಲ್‌ವೈಲ್ದ್ ಮಗೆ ಎಂದು ಕರೆಯುತ್ತಾರೆ.

**ಉದ್ದೇಶಗಳು**

- ಬೆಟ್ಟಕುರುಬ ಸಮಾಜದ ಸ್ಥಿತಿಗತಿಯ ಮೇಲೆ ಪುನರ್ವಸತಿಯ ಪ್ರಭಾವ ತಿಳಿದುಕೊಳ್ಳುವುದು.
- ಬೆಟ್ಟಕುರುಬ ಸಮುದಾಯದ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಗಳನ್ನು ವಿಶ್ಲೇಷಿಸುವುದು.
- ಬೆಟ್ಟಕುರುಬ ಸಮುದಾಯಗಳ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳನ್ನು ತಿಳಿಯುವುದು.

**ಸಂಶೋಧನಾ ವಿಧಾನಗಳು**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸಂದರ್ಶನ, ಅವಲೋಕನ, ಕುಟುಂಬ ಸಮೀಕ್ಷೆ, ಗುಂಪು ಚರ್ಚೆ, ಕ್ಷೇತ್ರಕಾರ್ಯ, ಪ್ರಕರಣ ಅಧ್ಯಯನ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ.

ಆನುಷಂಗಿಕ ಅಥವಾ ಮಾಧ್ಯಮಿಕ ಮಾಹಿತಿಯನ್ನು ಗ್ರಂಥಗಳು, ನಿಯತಕಾಲಿಕೆಗಳು, ದಾಖಲೆಗಳು, ವರದಿಗಳು, ಲೇಖನಗಳು, ಅಂತರ್ಜಾಲ ಮೂಲಗಳಿಂದ ಸಂಗ್ರಹಿಸಲಾಗಿದೆ. ಹೀಗೆ ಸಂಗ್ರಹಿಸಿದ ಪರಿಮಾಣಾತ್ಮಕ ಮತ್ತು ಗುಣಾತ್ಮಕ ಮಾಹಿತಿಯನ್ನು ಸಂಖ್ಯಾಶಾಸ್ತ್ರಜ್ಞರ ಸಹಾಯದಿಂದ ವಿಶ್ಲೇಷಣೆ ಮಾಡಲಾಗಿದೆ.

**ಅಧ್ಯಯನ ಕ್ಷೇತ್ರ**

ಈ ಅಧ್ಯಯನಕ್ಕೆ ಮೈಸೂರು ಜಿಲ್ಲೆ ಹೆಚ್.ಡಿ ಕೋಟೆ ತಾಲೂಕಿನ ಬಸವನಗಿರಿ ಬಿ ಹಾಡಿಯನ್ನು ಆಯ್ಕೆ ಮಾಡಿಕೊಂಡು 50 ಜನರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

**ಪುನರ್ವಸತಿಕರಣದ ಇತಿಹಾಸ ಹಾಗೂ ಸವಾಲುಗಳು ಸರ್ಕಾರದ ಕಾರ್ಯಕ್ರಮಗಳು**

ಭಾರತದಲ್ಲಿ ಒಟ್ಟು 571 ಉದ್ಯಾನವನಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ 482 ಉದ್ಯಾನವನಗಳನ್ನು ರಾಷ್ಟ್ರೀಯ ಉದ್ಯಾನವನಗಳು ಎಂದು ಗುರುತಿಸಲಾಗಿದೆ. ನಮ್ಮ ದೇಶದ ಅರಣ್ಯ ಜೀವಿ ಸಂರಕ್ಷಣಾ ಕಾಯಿದೆಯಲ್ಲಿ ಯಾವುದೇ ಉತ್ಪನ್ನಗಳನ್ನು ಸಂಗ್ರಹಿಸುವುದನ್ನು ನಿಷೇಧಿಸಲಾಗಿದೆ. ಈ ಪ್ರದೇಶದಲ್ಲಿ ಯಾರು ವಾಸಿಸುವಂತಿಲ್ಲ, ಜಾನುವಾರುಗಳನ್ನು ಮೇಯಿಸುವುದನ್ನು ನಿಷೇಧಿಸಲಾಗಿದೆ. ಆದಿವಾಸಿಗಳ ಪುನರ್ವಸತಿಗೆ ಸಂಬಂಧಿಸಿದ ಪರಿಹಾರ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರವು 1999 ರಲ್ಲಿ ಜಾರಿಗೊಳಿಸಿತು. ಈ ಪರಿಹಾರ ಕಾರ್ಯಕ್ರಮವನ್ನು "ಫಲಾನುಭವಿ ಕೇಂದ್ರಿತ ಆದಿವಾಸಿಗಳ ಪುನರ್ವಸತಿ ಕಾರ್ಯಕ್ರಮ" ವೆಂದು ಕರೆಯಲಾಗಿದೆ. ಜಾಗತಿಕ ಬ್ಯಾಂಕಿನ ಧನ ಸಹಾಯದಿಂದ ಕೈಗೊಂಡ "ಭಾರತ ಪರಿಸರ ಅಭಿವೃದ್ಧಿ" ಯೋಜನೆಯು ಈ ಪ್ರದೇಶದಲ್ಲಿ ಆದಿವಾಸಿಗಳ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ನಡೆಸಿದ ವರದಿಗಳ ಆಧಾರದ ಮೇಲೆ ಕೆಲವು ಪರಿಹಾರ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಪುನರ್ವಸತಿಗೆ ಸಂಬಂಧಿಸಿದಂತೆ ಮತ್ತು ನಾಗರಹೊಳೆ ಪರಿಸರದ ಬಗ್ಗೆ ಅನೇಕ ಅಧ್ಯಯನಗಳನ್ನು 1990 ರಲ್ಲಿ ನಡೆಸಲಾಗಿದೆ. ಹೀಗೆ ಹತ್ತು ಹಲವು ಯೋಜನೆಗಳು ಈ ಪ್ರಾಂತ್ಯದಲ್ಲಿ ಜಾರಿಯಲ್ಲಿವೆ.

**ಬುಡಕಟ್ಟು ಜನರ ಸ್ಥಳಾಂತರಕ್ಕೆ ಕಾರಣ**

ಡ್ಯಾಮ್ ಕಟ್ಟುವುದು, ಗಣಿಗಾರಿಕೆ ಮಾಡುವುದು, ಕೈಗಾರಿಕೆಗಳ ಸ್ಥಾಪನೆ, ಕಾಡುಪ್ರಾಣಿಗಳ ರಕ್ಷಣೆ ಇತ್ಯಾದಿಗಳಾಗಿವೆ. ಮೈಸೂರು ಕಮಿಷನರ್ ವರದಿಯಲ್ಲಿ ರಾಷ್ಟ್ರೀಯ ಉದ್ಯಾನವನಗಳ ನಿರ್ಮಾಣ ಮಾಡಲು ಮೈಸೂರು ಮತ್ತು ಕೊಡಗು ಜಿಲ್ಲೆಯ ಬುಡಕಟ್ಟುಗಳನ್ನು ಹೊರ ಹಾಕಿರುವುದು, 1972ರಲ್ಲಿ

ಬುಡಕಟ್ಟು ಜನಾಂಗಗಳು ಹಾಗೂ ಇತರೆಯವರು ಸೇರಿ ಸುಮಾರು 600 ಕುಟುಂಬಗಳನ್ನು ಹೊರಹಾಕಿರುವ ಬಗ್ಗೆ ಹಾಗೂ ಐ.ಟಿ.ಡಿ.ಪಿ. ಮತ್ತು ಎನ್.ಜಿ.ಓ ಅಂಕಿ ಅಂಶಗಳ ಪ್ರಕಾರ 3910 ಕುಟುಂಬಗಳನ್ನು ಹೊರಹಾಕಿವೆ ಎಂದು ವಿವರಿಸುತ್ತಾರೆ. ಜನರಿಗೆ ಏನೂ ಕೊಡದೆ ಸ್ಥಳಾಂತರಗೊಳಿಸಿರುವ ಕುಟುಂಬಗಳನ್ನು ಗುರ್ತಿಸಿ ಅವರಿಗೆ ಭೂಮಿ ಹಾಗೂ ಪುನರ್‌ವಸತಿ ಕೊಡಬೇಕೆಂದು ವರದಿ ಪ್ರಕಟಿಸಿರುವುದನ್ನು ಕಾಣಬಹುದಾಗಿದೆ. ತೇಗದ ಮರ, ಪ್ಲಾಂಟೇಷನ್‌ಗಳನ್ನು ನೆಡುವುದಕ್ಕೆ ಹಾಗೂ ಇನ್ನಿತರೆ ಕೆಲಸಗಳಿಗೆ ಅಲ್ಲಿರುವ ಬುಡಕಟ್ಟು ಜನರನ್ನು ತೊಡಗಿಸಿ ಒಂದು ಹಾಡಿಯಿಂದ ಇನ್ನೊಂದು ಹಾಡಿಗೆ ಕಳುಹಿಸುತ್ತಿದ್ದರು. ಆ ಕೆಲಸ ಮುಗಿದ ಮೇಲೆ ಅವರಿಗೆ ಬೇರೆ ಕೆಲಸಗಳು ಇಲ್ಲದೆ ಕೆಲವರು ತಮ್ಮ ಆಂತರಿಕ ಸಂಘರ್ಷದ ಕಾರಣದಿಂದ, ಸ್ವ ಇಚ್ಛೆಯಿಂದ ಸ್ಥಳಾಂತರಗೊಂಡಿರುವುದನ್ನು ಪ್ರಸ್ತಾಪಿಸಿದ್ದಾರೆ.

ಬೆಟ್ಟಕುರುಬ ಸಮುದಾಯದವರ ಜೊತೆಗೆ ಜೇನುಕುರುಬ ಸಮುದಾಯದವರು ಕೂಡ ಅರಣ್ಯವನ್ನು ತಮ್ಮ ಮೂಲನೆಲೆ ಎಂದು ನಂಬಿ ಅದನ್ನು ಸಂರಕ್ಷಿಸಿಕೊಂಡು ಅಲ್ಲೆ ವಾಸಿಸುತ್ತಿದ್ದರು. ಸ್ಥಳಾಂತರಕ್ಕೂ ಮುಂಚೆ ವಾಸ ಮಾಡುತ್ತಿದ್ದ ಅರಣ್ಯ ಭಾಗಗಳೆಂದರೆ – ಅಮಟೆಹಾಡಿ, ಚೌಡಳ್ಳಿ, ಗುಂಡ್ರೆ, ಮುತ್ತಿಗೆ ಹಾಡಿ, (ಬಾನೂರುಗದ್ದೆ) ಜಡೆಸೋಮನತೆಕ್ಕಲು, ಐನ್ಪುರ, ಕೊಲ್ಲಿಕಡ ಹಾಡಿ, ನಾಯಿಹಳ್ಳ ಹಾಡಿಗಳಲ್ಲಿ ವಾಸ ಮಾಡುತ್ತಿದ್ದರು. ಈ ಪ್ರದೇಶವು ಎನ್. ಬೇಗೂರು ಸಂರಕ್ಷಿತ ಪ್ರದೇಶಕ್ಕೆ ಒಳಪಟ್ಟಿರುವುದಾಗಿದ್ದು, ನಂತರ ಈ ಭಾಗವನ್ನು ಬಂಡೀಪುರ ರಾಷ್ಟ್ರೀಯ ಉದ್ಯಾನವನವೆಂದು ನಾಮಕರಣ ಮಾಡಿರುತ್ತಾರೆ. ಇವರು ಅರಣ್ಯದಲ್ಲಿ ಕಿರು ಉತ್ಪನ್ನಗಳ ಸಂಗ್ರಹಣೆ ಹಾಗೂ ಗಿಡಮೂಲಿಕೆ ಔಷಧಿಗಳ ತಯಾರಿಕೆ, ಕುಂಬ್ರಿ ಕೆತ್ತನೆ ಬೇಸಾಯ, ಬೊಂಬಿನ ಬಿದಿರಿನಿಂದ ಕರಕುಶಲ ವಸ್ತುಗಳ ತಯಾರಿಕೆ ಇವರ ಮೂಲವೃತ್ತಿಯಾಗಿತ್ತು. ಇವರು ಕೆತ್ತನೆ ಮಾಡುವ ಸ್ಥಳಗಳಲ್ಲಿ ಸಾಗುವನಿ ಮರದ ಪ್ಲಾಂಟೇಶನ್‌ಗಳನ್ನು ಅರಣ್ಯ ಇಲಾಖೆಯವರು ಪ್ರಾರಂಭಿಸಿದರು. ಇದರ ಜೊತೆಗೆ ರೈಲ್ವೆ ಮಾರ್ಗಗಳಿಗೆ ದೊಡ್ಡ ದೊಡ್ಡ ಮರಗಳನ್ನು ಟಿಂಬರ್ ಮಾಡಲು ಇವರನ್ನು ಕೂಲಿಯಾಳುಗಳಾಗಿ ಬಳಸಿಕೊಳ್ಳುತ್ತಿದ್ದರು. ಅದೇ ವರ್ಷದಲ್ಲಿ ಕಂಪನಿಗಳಿಗೆ ಬಿದಿರು ಕಟಾವು ಮಾಡಿಕೊಡುವುದು, ಕಾಕನಕೋಟೆಯಲ್ಲಿ ಆನೆಯನ್ನು ಹಿಡಿದು ಪಳಗಿಸಲು (ಖೆಡ್ಡ) ಬೆಟ್ಟಕುರುಬ, ಜೇನು ಕುರುಬ ಸಮುದಾಯದವರನ್ನು ಬಳಸಿಕೊಳ್ಳುತ್ತಿದ್ದು, ಎನ್.ಬೇಗೂರಿನ ಮಾಳದ ಹಾಡಿಯಲ್ಲಿ ಆನೆ ಕ್ಯಾಂಪ್ ಅನ್ನು ನಿರ್ಮಿಸಿದರು. ಅದೇ ಆನೆಯನ್ನು ದಸರಾ ದಿನ ಬಳಸಿಕೊಳ್ಳುತ್ತಿದ್ದರು. ಚೌಡಳ್ಳಿ ಹಾಡಿಯಲ್ಲಿ ಬೆಟ್ಟಕುರುಬ ಸಮುದಾಯದ ಇಂಜಿನಿ ತ್ವಟ್ನ್ ಕ್ವಡಮ್ ಮಗ್ಗೆ (ಅಡ್ಡ ಹೆಸರು) ಎಂಬ ವ್ಯಕ್ತಿಯು ಮರದ ಕಾರ್ಖಾನೆಯನ್ನು ಸ್ಥಾಪಿಸಿ ಅಲ್ಲೆ ತುಂಬ ವರ್ಷಗಳಿಂದ ಕೆಲಸ ಮಾಡುತ್ತಿದ್ದರು.

**ಅರಣ್ಯ ಇಲಾಖೆಯ ಜೊತೆಗಿನ ಸಂಘರ್ಷಗಳು**

ಅರಣ್ಯ ಇಲಾಖೆಯವರು ಅವರು ವಾಸಿಸುವ ಹಾಡಿಗಳಿಗೆ ಆನೆಗಳನ್ನು ತೆಗೆದುಕೊಂಡು ಹೋಗಿ ಅವರ ಗುಡಿಸಲುಗಳನ್ನು ನಾಶ ಮಾಡಿ, ಸಾಕುಪ್ರಾಣಿಗಳನ್ನು ಸಾಯಿಸಿ ಅವರನ್ನು ಬೆದರಿಸಿದ್ದರು. ಆಗ ಸರ್ಕಾರದವರು ಇವರಿಗೆ ಪುನರ್ವಸತಿಕರಣದ ವ್ಯವಸ್ಥೆಯನ್ನು ಸೂಕ್ತ ರೀತಿಯಲ್ಲಿ ಮಾಡದೆ ಇರುವುದರಿಂದ ತಮ್ಮ ಅಳಲನ್ನು ಯಾರಿಗೂ ತೋಡಿಕೊಳ್ಳಲಾಗದೆ ಗೊಂದಲಕ್ಕೆ ಒಳಗಾಗಿ ತಾವು ವಾಸಿಸುತ್ತಿದ್ದ ಅರಣ್ಯ ಭಾಗವನ್ನು ಬಿಟ್ಟು, ತಮ್ಮ ಸಮುದಾಯದ ಕೆಲವು ಕುಟುಂಬಗಳು ಕಾಡಂಚಿನ ಭಾಗಗಳಿಗೆ ವಾಸಿಸುತ್ತಿದ್ದರಿಂದ ತಾವು ಕೂಡ ಅಲ್ಲಿಗೆ ಬಂದು ವಾಸ ಮಾಡಲು ಪ್ರಾರಂಭಿಸಿದರು. ನಂತರ ಜೀವನೋಪಾಯಕ್ಕೆ ಅವರು ರೈತರ ಮನೆಗಳಲ್ಲಿ ಜೀತದಾಳುಗಳಂತೆ ಕೆಲಸಗಳಲ್ಲಿ ತೊಡಗಿರುತ್ತಾರೆ.

**ಅರಣ್ಯ ಭಾಗದಿಂದ ಹೊರಬಂದು ಇವರು ಸೇರಿಕೊಂಡ ಕಾಡಂಚಿನ ಹಾಡಿಗಗಳು**

ದೊಣ್ಣೆ ಮಾದನಹಾಡಿ, ಎಲಚಿಕಟ್ಟೆ ಹಾಡಿ, ಕೆಂಪನಹಾಡಿ, ಜಾಗನಕೋಟೆ ಹಾಡಿ ಇತ್ಯಾದಿಗಳನ್ನು ಕಾಣಬಹುದಾಗಿದೆ. ಕಬಿನಿ ಹಿನ್ನೀರಿನ ಮುಳುಗಡೆಯಾದ ರೈತರಿಗೆ ಅರಣ್ಯವನ್ನು ಕಡಿದು ಅವರಿಗೆ ಪುನರ್ವಸತಿಕರಣಗೊಳಿಸಿ ಭೂಮಿ, ನಿವೇಶನ ಹಾಗೂ ಪರಿಹಾರ ಸೌಕಾರ್ಯಗಳನ್ನು ಕೊಟ್ಟರು. ಆದರೆ ಅರಣ್ಯ ಪ್ರದೇಶಗಳಿಂದ ಹೊರಬಂದ ಬುಡಕಟ್ಟು ಜನರಿಗೆ ಇದರ ಸದುಪಯೋಗ ದೊರಕಲಿಲ್ಲ. ಭೀಮನಕೊಲ್ಲಿ ಪಕ್ಕದ ಹಳೆ ಜಾಗನಕೋಟೆ ಹಾಡಿಯಲ್ಲಿ 21/22 ಮುಳುಗಡೆಯಾದ ಕುಟುಂಬಗಳಿಗೆ ಕೆಂಚನಹಳ್ಳಿಯಲ್ಲಿ ರೆವಿನ್ಯೂಭೂಮಿ ಕೊಡಿಸುತ್ತಿವೆಂದು ನಂಬಿಸಿ ಪಟೇಲರು, ಶಾನುಭೋಗರು ಇವರಿಂದ ಹಣ ಪಡೆದು ಮೋಸ ಮಾಡಿರುತ್ತಾರೆ. ಅದರಲ್ಲಿ 9 ಜನರಿಗೆ ಭೂಮಿಯ ಸಾಗುವಳಿ ಚೀಟಿ ಇದ್ದರೂ ಸಹ ಅರಣ್ಯ ಇಲಾಖೆಯವರ ತಮ್ಮ ಜಾಗವೆಂದು ಕೊಡಲಿಲ್ಲ. ನಂತರ ಕೆಂಚನಹಳ್ಳಿ ರೆವಿನ್ಯೂ ಲ್ಯಾಂಡ್‌ನ್ನು ಅರಣ್ಯ ಇಲಾಖೆಯವರು ತಮ್ಮ ಜಾಗವೆಂದು ಪಡೆದರು.

**ಸ್ವಯಂ ಸೇವಾ ಸಂಸ್ಥೆಯ ಪಾತ್ರ**

1980 ರಲ್ಲಿ ಅಸ್ಥಿತ್ವಕ್ಕೆ ಬಂದ ಸ್ವಯಂ ಸೇವಾ ಸಂಸ್ಥೆಯು ಬುಡಕಟ್ಟು ಕೃಷಿಕರ ಸಂಘವನ್ನು ಸ್ಥಾಪಿಸಿ ಭೂಮಿ ಹೋರಾಟ ಪ್ರಾರಂಭಿಸಿದರು. ಅವರು ಆದಿವಾಸಿ ಸಮುದಾಯದವರಿಗೆ ಆಗುತ್ತಿದ್ದ ಅನ್ಯಾಯಗಳ ವಿರುದ್ಧದ ಸಿಡಿದೇಳಲು ಕಾರಣರಾದರು. ಕೆಂಚನಹಳ್ಳಿ ಹಾಗೂ ಜಾಗನಕೋಟೆ ಹಾಡಿಗಳಲ್ಲಿರುವ ಬೆಟ್ಟಕುರುಬ ಸಮುದಾಯದವರು ನಮಗೆ ಭೂಮಿ ಗ್ರ್ಯಾಂಟ್ ಆಗಿದೆ ಅದನ್ನು ನಮಗೆ ದೊರಕಿಸಿ ಕೊಡಿ ಎಂದು ಹೋರಾಟ ಮಾಡಿದಾಗ ಇಲಾಖೆಯವರು ಅವರ ಮೇಲೆ ಗಂಧದ ಮರ ಕಳ್ಳತನ ಮಾಡಿರುವ ಆರೋಪದಡಿ ಕೆಲವರನ್ನು ಅರೆಸ್ಟ್ ಮಾಡಿ ಕೆ.ಆರ್.ನಗರ ಜೈಲಿಗೆ ಹಾಕಿದರು. ನಂತರ ಸಂಸ್ಥೆಯವರ ಕಡೆಯಿಂದ ಹೋರಾಟ ಮಾಡಿ ಕೇಸನ್ನು ವಜಾ ಮಾಡಿ ವಾಪಸ್ಸಾತಿ ತೆಗೆದುಕೊಳ್ಳಲಾಯಿತು. ತದನಂತರ ಬಂಡೀಪುರ ಅರಣ್ಯದಿಂದ ಸ್ಥಳಾಂತರ ಹಾಗೂ ಕಬಿನಿ ಹಿನ್ನೀರಿನಿಂದ ನಿರಾಶ್ರಿತರಾದ ಬುಡಕಟ್ಟು ಸಮುದಾಯಗಳಿಗೆ 2005 ರಲ್ಲಿ ಸೊಳ್ಳೆಪುರ ಎ,ಬಿ ಮತ್ತು ಸಿ ಹಾಡಿಗಳಲ್ಲಿ ಪುನರ್ವಸತಿಕರಣವನ್ನು ಒಟ್ಟು 214 ಕುಟುಂಬಗಳನ್ನು ಮಾಡಲಾಗಿದೆ. ಅದರಲ್ಲಿ ಸೊಳ್ಳೆಪುರ ಬಿ (ಬಸವನಗಿರಿ ಬಿ ಹಾಡಿ) ಹಾಡಿಯಲ್ಲಿ ಬೆಟ್ಟಕುರುಬ ಸಮುದಾಯದವರು ಒಟ್ಟು 82 ಕುಟುಂಬಗಳನ್ನು ಕಾಣಬಹುದಾಗಿದೆ.

**ಪುನರ್ವಸತಿಕರಣಕ್ಕೆ ಒಳಪಟ್ಟ ಹಾಡಿಗಳು**

ರಾಜಪುರ ಹಾಡಿ, ಸಾಣೇಮಾದನಹಾಡಿ, ಬ್ರಹ್ಮಗಿರಿ, ಎಲಚಿಕಟ್ಟೆ, ದೊಣ್ಣೆಮಾದನಹಾಡಿ, ಕೆಂಪನಹಾಡಿ, ಜಾಗನಕೋಟೆ ಹಾಡಿ, ಕೆಂಚನಹಳ್ಳಿ ಇತ್ಯಾದಿಗಳನ್ನು ಕಾಣುತ್ತೇವೆ. ಸರ್ಕಾರವು ಇವರಿಗೆ ಮನೆಗಳನ್ನು ಕಟ್ಟಿಕೊಟ್ಟು ಎರಡೂವರೆ ಎಕರೆ ಜಮೀನನ್ನು ಸಹ ಕೊಟ್ಟಿರುತ್ತಾರೆ. ಆದರೆ ಎಲ್ಲರಿಗೂ ಈ ಸೌಲಭ್ಯಗಳು ದೊರಕಿಲ್ಲ. ಕೊಟ್ಟಿರುವ ಮನೆಗಳು ಕಳಪೆ ಗುಣಮಟ್ಟದಿಂದ ಕೂಡಿದ್ದು ಗೋಡೆಗಳು ಬಿರುಕು ಬಿಟ್ಟಿವೆ, ಕೆಲವು ಮನೆಗಳು ಬಿದ್ದು ಹೋಗಿವೆ. ಉಳುಮೆಗೆಂದು ಕಾಡು ಕಡಿದು ಕೊಟ್ಟ ಭೂಮಿಯಲ್ಲಿ ಬಹುತೇಕ ಮರದ ಬುಡಗಳು ಬೇರುಗಳಿಂದ ಕೂಡಿದ್ದು ವ್ಯವಸಾಯಕ್ಕೆ ಯೋಗ್ಯವಲ್ಲದ 'ಡಿ' ದರ್ಜೆಯ ಭೂಮಿಯಾಗಿದೆ. ಅವರು ಹೊಸ ಜಾಗದಲ್ಲಿ ನೆಲೆಯೂರಲು ಅವರಿಗೆ ಪ್ರತಿ ತಿಂಗಳು ಆಹಾರ ಪದಾರ್ಥ ಹಾಗೂ 500 ರೂ ಗಳನ್ನು ಒಂದು ವರ್ಷಗಳ ಕಾಲ ಕೊಟ್ಟಿರುತ್ತಾರೆ. ಪುನರ್ವಸತಿಗೆ ಹತ್ತು ಲಕ್ಷದ ಪ್ಯಾಕೇಜ್ ಇತ್ತು. ಆದರೆ ಆ ಪ್ಯಾಕೇಜ್ ಸೌಲಭ್ಯವನ್ನು ಸರ್ಕಾರವು ಸದ್ಬಳಕೆ ಮಾಡದೆ, ಆದಿವಾಸಿಗಳ ವಾರ್ಷಿಕ ಬಜೆಟನ್ನು (ಟ್ರೈಬಲ್ ಫಂಡ್) ಇಲ್ಲಿಗೆ ಹಾಕಿರುತ್ತಾರೆ. ಪುನರ್ವಸತಿಕರಣಕ್ಕೆ ಒಳಪಟ್ಟ ಬಸವನಗಿರಿ ಬಿ ಹಾಡಿಯಲ್ಲಿರುವ ಜನರಿಗೆ ಶೌಚಾಲಯದ

ಸಮಸ್ಯೆಗಳನ್ನು ಇಂದಿಗೂ ಕೂಡ ಎದುರಿಸುತ್ತಿದ್ದಾರೆ. ಇವರಿಗೆ ಪುನರ್ವಸತಿಕರಣದ ಸಂದರ್ಭದಲ್ಲಿ ಕೊಟ್ಟ ಶೌಚಾಲಯವು ಯೋಗ್ಯವಲ್ಲದಾಗಿದ್ದು, ಗೋಡೆಗಳು ಕುಸಿದಿರುವುದು, ಗುಂಡಿಗಳೆಲ್ಲ ಬೇಗ ಮುಚ್ಚಲ್ಪಟ್ಟಿರುವುದರಿಂದ ಕೆಲವರು ಅದೇ ಶೌಚಾಲಯವನ್ನು ತಾವೇ ಸರಿಪಡಿಸಿ ಉಪಯೋಗಿಸುತ್ತಿದ್ದಾರೆ. ಇನ್ನು ಕೆಲವರು ಹೊಸದಾಗಿಯೇ ಬೇರೆ ಶೌಚಾಲಯವನ್ನು ನಿರ್ಮಿಸಿ ಕೊಂಡಿದ್ದಾರೆ. ಕೆಲವು ಕುಟುಂಬಗಳು ಮಾತ್ರ ಇಂದಿಗೂ ಕೂಡ ಕಾಡಂಚಿನ ಭಾಗಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ಇದ್ದರೂ ಮಲ ವಿಸರ್ಜನೆಗೆ ಹೋಗುವುದನ್ನು ಕಾಣುತ್ತೇವೆ. ಪುನರ್ವಸತಿಕರಣದಿಂದ ಕೆಲವು ಕುಟುಂಬದವರು ತಮಗೆ ಮನೆ, ಜಮೀನು ಸಿಕ್ಕಿರುವುದರಿಂದ ತಮಗೆ ಅನುಕೂಲವಾಗಿದೆ ಎಂದು ಹೇಳಿದರು ಹಲವು ಕುಟುಂಬದವರು ತಾವು ಹಿಂದೆ ಇದ್ದಂತಹ ಹಾಡಿ ತಮಗೆ ಸೂಕ್ತವಾಗಿದ್ದು, ಆ ಅರಣ್ಯ ಪ್ರದೇಶದ ಭಾಗಗಳಲ್ಲಿ ಕಾಲ ಕಾಲಕ್ಕೆ ತಕ್ಕಂತೆ ಮಳೆಯು ಕಂಡು ಬಂದಿದ್ದು, ತಾವು ಬೆಳೆಗಳನ್ನು ಕೂಡ ಬೆಳೆಯುತ್ತಿದ್ದರು. ಆದರೆ ಈ ಅರಣ್ಯ ಭಾಗಗಳಲ್ಲಿ ಹೆಚ್ಚಾಗಿ ಮಳೆ ಬೀಳದಿರುವುದರಿಂದ ತಮಗೆ ಋತುಮಾನಕ್ಕೆ ತಕ್ಕಂತೆ ಕೃಷಿ ಬೆಳೆಯನ್ನು ಬೆಳೆಯುವಲ್ಲಿ ವಿಫಲರಾಗುತ್ತಿದ್ದು, ಬೇರೆಯವರಿಗೆ ಗುತ್ತಿಗೆ ನೀಡುವುದಾಗಿ ಹೇಳಿರುತ್ತಾರೆ.

### ಬೆಟ್ಟಕುರುಬ ಸಮುದಾಯದ ಸಾಮಾಜಿಕ ವ್ಯವಸ್ಥೆಯಲ್ಲಿ ಪುನರ್ವಸತಿಯ ಪ್ರಭಾವ

ಪ್ರಸ್ತುತ ಲೇಖನದಲ್ಲಿ ಬೆಟ್ಟಕುರುಬ ಸಮುದಾಯದ 50 ಜನ ಮಹಿಳೆಯರು ಹಾಗೂ ಪುರುಷರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದ್ದು, ಪುನರ್ವಸತಿಕರಣದಿಂದ ಅವರ ಸಾಮಾಜಿಕ ವ್ಯವಸ್ಥೆಯಲ್ಲಿ ಆಗಿರುವ ಬದಲಾವಣೆಗಳನ್ನು ತಿಳಿಯಲಾಯಿತು. ಅವು ಈ ಕೆಳಕಂಡಂತಿವೆ.

**ಕೋಷ್ಟಕ 1: ಅಧ್ಯಯನಕ್ಕೊಳಪಟ್ಟ ವ್ಯಕ್ತಿಗಳ ವಯೋಮಾನದ ವಿವರಗಳು**

| ಕ್ರ.ಸಂ | ವಯಸ್ಸು | ಸಂಖ್ಯೆ | ಶೇಕಡ |
|---|---|---|---|
| 1 | 25–35 | 10 | 20 |
| 2 | 35–45 | 14 | 28 |
| 3 | 45 ವರ್ಷ ಮೇಲ್ಪಟ್ಟವರು | 26 | 52 |
| 4 | **ಒಟ್ಟು** | **50** | **100** |

ಕೋಷ್ಟಕ 1ರಲ್ಲಿ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ 25–35 ವಯಸ್ಸಿನ ಸ್ತ್ರೀ ಮತ್ತು ಪುರುಷರು ಶೇ 20 ಕಂಡು ಬಂದರೆ ಶೇ 28 ರಷ್ಟು 35–45 ವಯಸ್ಸಿನವರಾಗಿದ್ದು, ಶೇ 52 ರಷ್ಟು 45 ವರ್ಷ ಮೇಲ್ಪಟ್ಟವರೆಂದು ಗುರುತಿಸಲಾಗಿದೆ.

#### *ಸಾಮಾಜಿಕ ವ್ಯವಸ್ಥೆ*

ಬೆಟ್ಟಕುರುಬ ಸಮುದಾಯದವರು ಹಿಂದೆ ಅರಣ್ಯದೊಳಗೆ ವಾಸವಿರಬೇಕಾದರೆ ತಮಗೆ ವಾಸಿಸಲು ಆಗದೆ ಇರುವ ಅರಣ್ಯ ಭಾಗವನ್ನು ಬಿಡಲು ಆ ಜಮ್ಮದ ಯಜಮಾನರ ಒಪ್ಪಿಗೆ ಪಡೆದು ನಂತರ ಇನ್ನೊಂದು ಅರಣ್ಯ ಭಾಗಕ್ಕೆ ಹೋಗುತ್ತಿದ್ದರು. ಅಲ್ಲಿಯೂ ಕೂಡ ಯಾವ ಜಮ್ಮದ ಯಜಮಾನನಿರುತ್ತಾನೋ ಆತನ ಒಪ್ಪಿಗೆಯನ್ನು ಪಡೆದು ವಾಸಿಸುತ್ತಿದ್ದರು. ಸ್ಥಳಾಂತರ ಹಾಗೂ ಪುನರ್ವಸತಿಕರಣದ ನಂತರ ಎಲ್ಲರೂ ಒಂದೆಡೆ ವಾಸವಿರುವುದನ್ನು ಕಾಣುತ್ತೇವೆ.

#### *ಕುಟುಂಬ*

ಹಿಂದೆ ಅರಣ್ಯದೊಳಗೆ ವಾಸಿಸುತ್ತಿದ್ದ ಬೆಟ್ಟಕುರುಬ ಸಮುದಾಯವು ಇಂದು ಪುನರ್ವಸತಿಕರಣದ ಕಾರಣದಿಂದ ವಾಸಿಸಲು ಮನೆಗಳಿಲ್ಲದೆ ಒಂದಕ್ಕಿಂತ ಹೆಚ್ಚು ಕುಟುಂಬಗಳು ಒಂದೇ ಮನೆಯೊಳಗೆ ವಾಸಿಸುತ್ತಿದ್ದಾರೆ. ಆದರೆ ಕೆಲವೊಂದು ಕುಟುಂಬದವರು ಮನೆಯ ಅಕ್ಕ ಪಕ್ಕ ಶೆಡ್ಡುಗಳನ್ನು ನಿರ್ಮಿಸಿ ತಾವೇ ಪ್ರತ್ಯೇಕವಾಗಿ ವಾಸಿಸುತ್ತಿರುವುದನ್ನು ಕಾಣುತ್ತೇವೆ. ಕೆಲವು ಸಂಸಾರಗಳು ವಿಭಕ್ತ

ಕುಟುಂಬಗಳಾಗಿ ವಾಸಿಸುವುದು ಕೂಡ ಪ್ರಸ್ತುತದಲ್ಲಿದೆ. ಹಿಂದೆ ಇವರಲ್ಲಿ ಕೌಟುಂಬಿಕ ಕಲಹಗಳು ಕಂಡು ಬಂದರೆ ಆ ಹಾಡಿಯ ಯಜಮಾನನ ಮೂಲಕ ಪರಿಹಾರವನ್ನು ಕಂಡುಕೊಳ್ಳುತ್ತಿದ್ದರೂ. ಯಜಮಾನನಿಗೆ ಹೇಗೆ ಗೌರವ ಮನ್ನಣೆಗಳು ಸಿಗುತ್ತದೆಯೋ ಹಾಗೆಯೇ ಆತನ ಹೆಂಡತಿಗೂ ಕೂಡ ಕೊಡುತ್ತಿದ್ದರು. ಆದರೆ ಇಂದು ಯನಮಾನನ ಮೂಲಕ ಹಾಡಿಯಲ್ಲಿ ಅಥವಾ ಕುಟುಂಬದಲ್ಲಿ ವ್ಯಾಜ್ಯಗಳು ಬಗೆಹರಿಯದಿದ್ದರೆ ಅರಕ್ಷಕ ಠಾಣೆ ಹಾಗೂ ನ್ಯಾಯಾಲಯಕ್ಕೆ ಹೋಗಿ ಸಮಸ್ಯೆಗಳನ್ನು ಬಗೆಹರಿಸುವುದನ್ನು ಕಾಣುತ್ತೇವೆ. ಹಲವು ಪುರುಷರು ಮಹಿಳೆಯರಿಗೆ ಮನೆಗೆಲಸದಲ್ಲಿ ಸಹಾಯ ಮಾಡುವವರಾಗಿದ್ದು, ಕೆಲವು ಪುರುಷರು ಮಾತ್ರ ಮನೆಯೊಳಗೆ ನಡೆಯುವ ಕೆಲಸಗಳಿಗೆ ಸಹಾಯ ಮಾಡದೆ ಹೊರಗಿನ ಕೆಲಸಗಳಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ. ಮಕ್ಕಳನ್ನು ಬೆಳೆಸುವಾಗ ಗಂಡು ಮಕ್ಕಳು, ಹೆಣ್ಣು ಮಕ್ಕಳು ಎಂದು ತಾರತಮ್ಯವಿಲ್ಲದೆ ಸಮಾನತೆಯಿಂದ ಕಾಣುತ್ತಾರೆ.

***ವಿವಾಹ***

ವಿವಾಹವಾಗುವ ಸ್ತ್ರೀ ಮತ್ತು ಪುರುಷರ ಒಪ್ಪಿಗೆಯು ಮುಖ್ಯವಾಗಿರುತ್ತದೆ. ಗಂಡಿಗೂ ಹೇಗೆ ವಿವಾಹವಾಗಲು ಆಯ್ಕೆ ಇರುತ್ತದೆಯೋ ಅಷ್ಟೆ ಆಯ್ಕೆಯ ಸ್ವಾತಂತ್ರ್ಯ ಹೆಣ್ಣಿಗೂ ಇರುವುದನ್ನು ಕಾಣುತ್ತೇವೆ. ಆಕೆಯು ಹುಡುಗ ತನಗೆ ಒಪ್ಪಿಗೆ ಇಲ್ಲದೆ ಹೋದರೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾಳೆ. ಇವರಲ್ಲಿ ತಾಳಿ ಕಟ್ಟುವ ಪದ್ಧತಿಗಳು ಹಿಂದೆ ಅಸ್ಥಿತ್ವದಲ್ಲಿರಲಿಲ್ಲ. ಪ್ರಸ್ತುತದಲ್ಲಿ ಅಸ್ಥಿತ್ವದಲ್ಲಿದೆ. ಇಂದಿಗೂ ಕೂಡ ವರದಕ್ಷಿಣೆ ಪದ್ಧತಿಗಳು ಕಂಡು ಬಂದಿಲ್ಲ. ಪುರುಷ ಮತ್ತು ಮಹಿಳೆಯರಿಗೆ ಮರುವಿವಾಹವಾಗಲು ಅವಕಾಶವಿದ್ದು, ಇದಕ್ಕೆ ಯಜಮಾನನ ಒಪ್ಪಿಗೆಯನ್ನು ಪಡೆದುಕೊಳ್ಳಬೇಕು. ವಿದವೆ, ವಿದುರ ಪುನರ್ ವಿವಾಹವಾಗಲು ಸಂಪೂರ್ಣ ಅವಕಾಶವಿದ್ದು, ತಮ್ಮ ಒಪ್ಪಿಗೆಯನ್ನು ಯಜಮಾನನಿಗೆ ತಿಳಿಸಿ ತಾವು ಇಷ್ಟಪಟ್ಟಿರುವವರ ಜೊತೆ ಜೀವನ ನಡೆಸಬಹುದಾಗಿದೆ. ಪುನರ್ವಸತಿಯ ನಂತರ ವಿವಾಹ ಪದ್ಧತಿಯಲ್ಲಿ ಬದಲಾವಣೆಗೊಂಡಿರುವುದನ್ನು ಕಾಣುತ್ತೇವೆ. ಅಂಬಾಲದಲ್ಲಿ ಅಥವಾ ಹುಡುಗಿಯ ಮನೆಯ ಮುಂದೆ ಸಂಪ್ರದಾಯಿಕವಾಗಿ ನಡೆದುಕೊಂಡು ಬರುತ್ತಿದ್ದ ವಿವಾಹವು ಇಂದು ದೇವಸ್ಥಾನಗಳಲ್ಲಿ ಹಿಂದೂ ಸಂಪ್ರದಾಯದಂತೆ ನಡೆಯುತ್ತಿವೆ. ತಾಳಿ ಕಟ್ಟುವ ಪದ್ಧತಿಯು ಅಸ್ಥಿತ್ವದಲ್ಲಿವೆ. ಹೊರಪಂಗಡದ ವಿವಾಹ ಹಾಗೂ ಅಂತರ್ಜಾತಿಯ ವಿವಾಹದ ಪ್ರಕರಣಗಳು ಕಂಡು ಬರುತ್ತಿವೆ. ಪ್ರೇಮ ವಿವಾಹಗಳು ಮಾತ್ರ ಮೊದಲಿನಿಂದಲೂ ಬಳಕೆಯಲ್ಲಿರುವುದನ್ನು ಕಾಣುತ್ತೇವೆ. ಪುನರ್ವಸತಿಕರಣದ ನಂತರ ಕೆಲವು ಹಾಡಿಗಳಲ್ಲಿ ಯಜಮಾನನ ಒಪ್ಪಿಗೆ ಪಡೆಯದೆ ವಿವಾಹವಾಗುವ ಪ್ರಕರಣಗಳನ್ನು ನೋಡಬಹುದಾಗಿದೆ.

**ಕೋಷ್ಟಕ 2: ವಿವಾಹದ ವಯಸ್ಸು**

| **ಕ್ರ. ಸಂ** | **ವಿವಾಹದ ವಯಸ್ಸು** | **ಸಂಖ್ಯೆ** | **ಶೇಕಡ** |
|---|---|---|---|
| 1 | 8–14 ವರ್ಷ | 06 | 12 |
| 2 | 14–20 | 30 | 60 |
| 3 | 20–26 ವರ್ಷ ಮೇಲ್ಪಟ್ಟವರು | 14 | 28 |
| 4 | **ಒಟ್ಟು** | **50** | **100** |

ಅಧ್ಯಯನಕ್ಕೆ ಒಳಪಟ್ಟ ಸ್ತ್ರೀ ಮತ್ತು ಪುರುಷರಲ್ಲಿ ಶೇ 12 ಮಂದಿ ಅತಿ ಚಿಕ್ಕ ವಯಸ್ಸಿಗೆ ವಿವಾಹವಾಗಿದ್ದರೆ ಶೇ 60 ರಷ್ಟು ಜನರು 14–20 ವಯಸ್ಸಿಗೆ ವಿವಾಹವಾಗಿರುತ್ತಾರೆ. ಪುನರ್ವಸತಿಕರಣದ ನಂತರವು ಕೂಡ ಬಾಲ್ಯ ವಿವಾಹ ಪದ್ಧತಿ ಅಸ್ಥಿತ್ವದಲ್ಲಿದೆ. ಹಾಗೆಯೇ ಶೇ 28 ರಷ್ಟು ಜನರು ಮಾತ್ರ ವಿವಾಹದ ವಯಸ್ಸಿಗೆ ವಿವಾಹವಾಗಿರುತ್ತಾರೆ.

**ಪ್ರೌಢಾವಸ್ಥೆ, ಗರ್ಭಿಣಿ, ಬಾಣಂತಿ**

ಇವರಲ್ಲಿ ಋತುಮತಿಯ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಆಗುತ್ತಿದ್ದ ಮುಟ್ಟನ್ನು ಸಹಜ ಮತ್ತು

ಪ್ರಕೃತಿದತ್ತವಾದುದೆಂದು ನಂಬಿ ಇದನ್ನು ಮೈಲಿಗೆ ಅಥವಾ ಸೂತಕವೆಂದು ಪರಿಗಣಿಸುತ್ತಿರಲಿಲ್ಲ. ಆದರೆ ಇಂದು ಮೈಲಿಗೆ ಅಥವಾ ಸೂತಕ ಎಂಬ ಆಚರಣೆಗಳನ್ನು ಅನುಸರಿಸಿ ಆಕೆಯನ್ನು ಮನೆಯ ಒಂದು ಪ್ರತ್ಯೇಕ ಕೋಣೆಯಲ್ಲಿ ಅಥವಾ ರೂಮಿನಲ್ಲಿ ಬಿಟ್ಟು ಆಕೆಗೆ ಆರೈಕೆ ಮಾಡಿ ಹಸೆಮಣೆಶಾಸ್ತ್ರ ಕಾರ್ಯಕ್ರಮವನ್ನು ಮಾಡುತ್ತಾರೆ. ಹಿಂದೆ ಇವರಲ್ಲಿ ಗರ್ಭಿಣಿ ಎಂದು ಪತ್ತೆ ಮಾಡಲು ಆಕೆಯ ನಾಡಿ ಮಿಡಿತಗಳಿಂದ ಹಾಗೂ ಮುಟ್ಟಾಗಿರುವ ತಿಂಗಳಿನ ಸಹಾಯದಿಂದ ಕಂಡು ಹಿಡಿಯುತ್ತಿದ್ದರು. ಗರ್ಭಿಣಿಯರು ಆಸ್ಪತ್ರೆಗಳ ಅರಿವಿಲ್ಲದೆ ಅವರು ದಿನನಿತ್ಯ ಕೆಲಸಗಳಲ್ಲಿ ತೊಡಗುತ್ತಿದ್ದರು. ಆದರೆ ಪುನರ್ವಸತಿಯ ನಂತರ ಮಹಿಳೆಯರು ಮೂರು ತಿಂಗಳು ಮೇಲೆ ಮುಟ್ಟಾಗದಿದ್ದಾರೆ ತಮ್ಮ ಹಾಡಿಗೆ ಬರುವ ಸಂಚಾರಿ ವಾಹನಗಳಲ್ಲಿ ತೋರಿಸಿ ಗರ್ಭಿಣಿ ಎಂದು ತಿಳಿದು ಆಸ್ಪತ್ರೆಗೆ ಹೋಗುವ ಮಹಿಳೆಯರು ಕೆಲವರಾದರೆ ಇನ್ನುಳಿದ ಮಹಿಳೆಯರು ಖುದ್ದಾಗಿ ಆಸ್ಪತ್ರೆಗೆ ಹೋಗಿ ಅಲ್ಲೆ ಪರೀಕ್ಷೆ ಮಾಡಿಸುತ್ತಾರೆ. ಹಿಂದೆ ಮನೆಯಲ್ಲಿ ಹೆರಿಗೆಯಾಗುತ್ತಿದ್ದು ಮಕ್ಕಳಾಗದಿರುವ ಶಸ್ತ್ರ ಚಿಕಿತ್ಸೆ ಸೌಲಭ್ಯಗಳು ಇಲ್ಲದೆ ಇದ್ದುದ್ದರಿಂದ 5 ಕ್ಕಿಂತ ಹೆಚ್ಚಿನ ಮಕ್ಕಳು ಇರುತ್ತಿದ್ದವು. ಆದರೆ ಇಂದು ಆಸ್ಪತ್ರೆಗಳಲ್ಲಿ ಹೆರಿಗೆಯಾಗುವುದರ ಜೊತೆಗೆ ಮಕ್ಕಳಾಗದಿರುವ ಶಸ್ತ್ರ ಚಿಕಿತ್ಸೆಗಳನ್ನು ಆಸ್ಪತ್ರೆಗಳಲ್ಲಿ ಮಾಡಿಸುವುದನ್ನು ಕಾಣುತ್ತೇವೆ.

**ಶವಸಂಸ್ಕಾರ**

ಇವರಲ್ಲಿ ಹಿಂದಿನಿಂದಲೂ ಸುಡುವ ಪದ್ಧತಿಗಿಂತ ಹೂಳುವ ಪದ್ಧತಿಯು ಅಸ್ಥಿತ್ವದಲ್ಲಿದ್ದು, ಇಲ್ಲಿ ಸ್ತ್ರೀ ಮತ್ತು ಪುರುಷರನ್ನು ಹಿರಿಯ ಅಜ್ಜರು ಗುರುತಿಸಿರುವ ಸ್ಮಶಾನ ಜಾಗದಲ್ಲಿ ಹೂಳುತ್ತಾರೆ. ಇವರ ಸ್ಮಶಾನ ಜಾಗವು ಬೇರೆ ಜನಾಂಗದವರಿಗೆ ಪ್ರವೇಶವಿರುವುದಿಲ್ಲ. ಸತ್ತಿರುವವರು ಮಕ್ಕಳಾದರೆ ಅವರ ಸೂತಕವನ್ನು 5 ಅಥವಾ 7 ದಿನಗಳಲ್ಲಿ, ಹಿರಿಯವರಾದರೆ 9 ಅಥವಾ 12 ದಿನಗಳಲ್ಲಿ ಸೂತಕ ಕಳೆಯುತ್ತಾರೆ. ಈ ಕಾರ್ಯವನ್ನು ಅಂಬಾಲದಲ್ಲಿ ಮಾಡುತ್ತಾರೆ.

**ಶೈಕ್ಷಣಿಕ ಮಟ್ಟ**

ಶಿಕ್ಷಣ ವಿಷಯದಲ್ಲೂ ಕೂಡ ಗಂಡು ಮಕ್ಕಳು ಹೆಣ್ಣು ಮಕ್ಕಳೆಂಬ ಬೇಧಭಾವ ಇಲ್ಲದೆ ಶಾಲೆಗೆ ಕಳುಹಿಸುತ್ತಾರೆ. ಸ್ವಾತಂತ್ರ್ಯ ಬಂದ ನಂತರ ಗಿರಿಜನ ಹಾಡಿಗಳಲ್ಲಿ ಆಶ್ರಮಶಾಲೆಗಳು ತೆರೆದಿದ್ದು ಈ ಸಮುದಾಯದ ಮಕ್ಕಳ ಶಿಕ್ಷಣವು ಇಲ್ಲಿಯ ತನಕ ಸುಧಾರಣೆಯಾಗುತ್ತಿಲ್ಲ. ಏಕೆಂದರೆ ಉನ್ನತ ಶಿಕ್ಷಣವನ್ನು ಪಡೆದು ವಿವಿಧ ಇಲಾಖೆಗಳಲ್ಲಿ ಉದ್ಯೋಗಗಳನ್ನು ಪಡೆದುಕೊಳ್ಳದಿರುವುದನ್ನು ಕಾಣುತ್ತೇವೆ. ಆಗಿನಿಂದ ಆಳ್ವಿಕೆಯಲ್ಲಿದ್ದ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಇದರ ಬಗ್ಗೆ ಆಯಾಯ ವರ್ಷಗಳಲ್ಲಿ ಗಂಭೀರವಾಗಿ ಪುನರ್‌ವಿಮರ್ಶೆ ಮಾಡದಿರುವುದು ಕಾರಣವಾಗಿದೆ.

**ಕೋಷ್ಟಕ 3: ಅಧ್ಯಯನಕ್ಕೆ ಒಳಪಟ್ಟ ವ್ಯಕ್ತಿಗಳ ಶೈಕ್ಷಣಿಕ ವಿವರಗಳು**

| ಕ್ರ.ಸಂ | ಶೈಕ್ಷಣಿಕ ಮಟ್ಟ | ಸಂಖ್ಯೆ | ಶೇಕಡ |
|---|---|---|---|
| 1 | ಅನಕ್ಷರಸ್ಥರು | 22 | 44 |
| 2 | ಪ್ರಾಥಮಿಕ | 20 | 40 |
| 3 | ಪ್ರೌಢ | 06 | 12 |
| 4 | ಪದವಿ | 02 | 04 |
| **5** | **ಒಟ್ಟು** | **50** | **100** |

ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಈ ಸಮುದಾಯದವರ ಪ್ರಾಥಮಿಕ ಹಂತದ ಶಿಕ್ಷಣ (1–7ನೇ ತರಗತಿ) ಪಡೆದವರ ಪ್ರಮಾಣದ ಶೇ.40 ರಷ್ಟಿದೆ. ಇವರು ಶಾಲೆ ಬಿಡಲು ಕಾರಣ ಬಡತನ. ಬುಡಕಟ್ಟು ಮಕ್ಕಳ ಶಿಕ್ಷಣಕ್ಕಾಗಿ ಆಶ್ರಮಶಾಲೆಗಳು ಕಾರ್ಯ ನಿರ್ವಹಿಸುತ್ತಿವೆಯಾದರೂ, ಉತ್ತಮ ಶೈಕ್ಷಣಿಕ ಪರಿಸರವಿಲ್ಲ. ಹಾಗಾಗಿ ಆಶ್ರಮಶಾಲೆಗಳಲ್ಲಿ ಊಟ ಸಿಗುತ್ತದೆ ಎಂಬ ಕಾರಣಕ್ಕೆ ಶಾಲೆಗೆ ಹೋಗುತ್ತಿದ್ದುದ್ದು ಎಂಬುದಾಗಿ ಹೇಳಿದ್ದಾರೆ. ಇವರು ವಾಸಿಸುವ ಹಾಡಿಗಳಿಂದ ಶಾಲೆಗಳು ದೂರವಿರುವುದರಿಂದ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂಜರಿಯುತ್ತಾರೆ. ಬಡತನದ ಕಾರಣದಿಂದ ಕೂಲಿಗೆ ಹೋಗುವುದು

ಅನಿವಾರ್ಯವಾಗಿರುವುದ್ದರಿಂದ ಮನೆಯಲ್ಲಿರುವ ಸಣ್ಣ ವಯಸ್ಸಿನ ಮಕ್ಕಳನ್ನು ನೋಡಿಕೊಳ್ಳಲು ಶಾಲೆಗೆ ಹೋಗುವ ಮಕ್ಕಳನ್ನು ಶಾಲೆ ಬಿಡಿಸುತ್ತಾರೆ. ಸ್ವಲ್ಪ ದೊಡ್ಡವರಾದ ಮೇಲೆ ಆ ಮಕ್ಕಳನ್ನೂ ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗುವುದು (ಜೀತ ಪದ್ಧತಿ), ಸಾಕು ಪ್ರಾಣಿಗಳನ್ನು ಮೇಯಿಸಲು ಬಿಡುವುದು, ಮನೆಗೆಲಸಕ್ಕೆ ಮಾಡಲು ಬಳಸಿಕೊಳ್ಳುವುದು ಅಧ್ಯಯನದಿಂದ ತಿಳಿದು ಬಂದಿದೆ. ಶೇ 12 ರಷ್ಟು ಜನರು ಪ್ರೌಢ ಹಂತದಲ್ಲಿ ಶಿಕ್ಷಣವನ್ನು ಪಡೆದರೆ ಶೇ 44 ರಷ್ಟು ಅನಕ್ಷರಸ್ಥರಾಗಿದ್ದಾರೆ. ಕೆಲವರು ಸಹಿ ಹಾಕುವುದನ್ನು ಮನೆಯ ಇತರೆ ಸದಸ್ಯರುಗಳಿಂದ ಕಲಿತ್ತಿದ್ದರೆ ಇನ್ನು ಕೆಲವರು ಇಂದಿಗೂ ಕೂಡ ಹೆಬ್ಬೆಟು ಹಾಕುವುದನ್ನು ಕಾಣಬಹುದು. ಹಾಗೆಯೇ ಶೇ 4 ರಷ್ಟು ಪದವಿ ಹಂತದಲ್ಲಿ ವಿದ್ಯಾಭ್ಯಾಸ ಪಡೆದಿರುವುದನ್ನು ಕಾಣುತ್ತೇವೆ. ಪುನರ್ವಸತಿಕರಣಕ್ಕೂ ಮುಂಚೆ ಮಕ್ಕಳ ಶೈಕ್ಷಣಿಕ ಮಟ್ಟವು ಶೇ 28 ರಷ್ಟಿದ್ದು, ಪುನರ್ವಸತಿಯ ನಂತರ ಶಾಲೆಗೆ ಹೋಗುವವರ ಪ್ರಮಾಣವು ಶೇ 51 ರಷ್ಟಿದೆ. ಹಾಗೆಯೇ ಶಾಲೆ ಬಿಟ್ಟ ಮಕ್ಕಳ ಪ್ರಮಾಣ ಶೇ 21 ರಷ್ಟಿರುವುದನ್ನು ಅಧ್ಯಯನದಲ್ಲಿ ಕಾಣುತ್ತೇವೆ. ಪುನರ್ವಸತಿಕರಣದ ನಂತರ ಬೆಟ್ಟಕುರುಬ ಸಮುದಾಯದ ಮಕ್ಕಳು ಪ್ರಾಥಮಿಕ ಹಂತದಲ್ಲಿಯೇ ಶಾಲೆ ಬಿಡುವ ಪ್ರಮಾಣವು ಅಧಿಕವಾಗಿದೆ. ಕೂಲಿ ಕೆಲಸಗಳಿಗೆ ಪೋಷಕರು ತಮ್ಮ ಮಕ್ಕಳನ್ನು ಕೆಲಸಕ್ಕೆ ಕರೆದುಕೊಂಡು ಹೋಗುವುದರಿಂದ ಮಕ್ಕಳು ಶಾಲೆ ಬಿಡುವ ಪ್ರಮಾಣ ಹೆಚ್ಚಾಗುತ್ತಿದೆ. ಹಾಗೆಯೇ ಇಂದು ತಮ್ಮ ಮೈಯಲ್ಲಿ ದೇವರು ಬರುತ್ತದೆಂದು ಗಂಡು ಮಕ್ಕಳು ಶಾಲೆ ಬಿಡುತ್ತಿದ್ದಾರೆ. (ಕೆಲವು ಮಕ್ಕಳು ಓದಲು ಆಸಕ್ತಿ ಇಲ್ಲದೆ ಪೋಷಕರ ಬಲವಂತಕ್ಕೆ ಶಾಲೆಗೆ ಹೋಗುತ್ತಿರುತ್ತಾರೆ. ಅಂತಹ ಮಕ್ಕಳು ತಾವು ದೇವರು ಗುಡ್ಡರಾದರೆ ತಮ್ಮ ಪೋಷಕರು ತಮ್ಮನ್ನು ಶಾಲೆಗೆ ಕಳುಹಿಸುವುದಿಲ್ಲ ಎಂಬುದಾಗಿ ಯೋಚಿಸಿದರು. ನಂತರ ಅವರು ತಮ್ಮ ಮನೆಯ ಪಕ್ಕದಲ್ಲಿ ಅಥವಾ ತಮ್ಮ ಜಮೀನಿನಲ್ಲಿ ಚಿಕ್ಕದಾಗಿ ದೇವಸ್ಥಾನಗಳನ್ನು ನಿರ್ಮಿಸಿ ಪ್ರತಿನಿತ್ಯ ಅಲ್ಲಿ ಪೂಜೆ ಮಾಡುತ್ತಾರೆ. ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿರುವ ಮಕ್ಕಳು ಆರನೇ ತರಗತಿಗೆ ವಸತಿ ಶಾಲೆಗಳಿಗೆ ಆಂಗ್ಲ ಮಾಧ್ಯಮಕ್ಕೆ ದಾಖಲಾಗಿದ್ದು, ಅಲ್ಲಿ ಆಂಗ್ಲ ಭಾಷೆಯನ್ನು ಅರ್ಥಮಾಡಿಕೊಂಡು ಓದಲು ಕಷ್ಟವಾಗುತ್ತದೆಂದು ಹೇಳಿ ಆ ಶಾಲೆ ಬಿಟ್ಟು ಮತ್ತೆ ಸರ್ಕಾರಿ ಶಾಲೆಯ ಕನ್ನಡ ಮಾಧ್ಯಮಕ್ಕೆ ದಾಖಲಾಗಿ ಅಲ್ಲಿಯೂ ಕೂಡ ಓದದೇ ಶಾಲೆ ಬಿಡುವುದನ್ನು ನೋಡಬಹುದಾಗಿದೆ. ಉನ್ನತ ವಿಧ್ಯಾಭ್ಯಾಸವನ್ನು ಬೆರಳೆಣಿಕೆಯಷ್ಟು ಮಂದಿ ಪಡೆದುಕೊಂಡಿದ್ದರೂ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉದ್ಯೋಗದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

**ಆರ್ಥಿಕ ವ್ಯವಸ್ಥೆ**

ಬೆಟ್ಟಕುರುಬ ಸಮುದಾಯದವರು ಅತಿ ಹೆಚ್ಚಾಗಿ ಇಂದಿಗೂ ಕೂಡ ಕೂಲಿ ಕೆಲಸಗಳಲ್ಲಿ ತೊಡಗಿರುವುದನ್ನು ಕಾಣುತ್ತೇವೆ. ಕೆಲವೊಂದು ಮನೆಗಳಲ್ಲಿ ಹಸು, ಆಡು ಕುರಿಗಳು ಕಂಡು ಬರುತ್ತವೆ. ಅದಕ್ಕೆ ಮೇವು ಒದಗಿಸಲು ಹಿಂಸೆಯಾಗಿರುವುದರಿಂದ ಸಾಕು ಪ್ರಾಣಿಗಳನ್ನು ಸಾಕಲು ಹಿಂದೆಟು ಹೊಡೆಯುತ್ತಾರೆ. ಅರಣ್ಯದ ಅಂಚಿನಲ್ಲಿ ತಮ್ಮ ಪ್ರಾಣಿಗಳಿಗೆ ಬೇಕಾದ ಮೇವು ಸಿಗದಿರುವುದರಿಂದ ತಾವು ಸಾಕಿರುವ ಪ್ರಾಣಿಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿರುತ್ತಾರೆ. ಒಂದೆರಡನ್ನು ತಮ್ಮ ಮಕ್ಕಳ, ಮೊಮ್ಮಕ್ಕಳ ಹೆಸರನ್ನು ಹೇಳಿ ನೋಡಿಕೊಳ್ಳುವುದನ್ನು ಕಾಣುತ್ತೇವೆ.

**ಕೋಷ್ಟಕ 4: ಅಧ್ಯಯನಕ್ಕೆ ಒಳಪಟ್ಟ ವ್ಯಕ್ತಿಗಳ ವೃತ್ತಿ ವಿವರ**

| ಕ್ರಸಂ | ವೃತ್ತಿ | ಸಂಖ್ಯೆ | ಶೇಕಡ |
|---|---|---|---|
| 1 | ಮೂಲ ವೃತ್ತಿ (ಕುಲಕಸುಬು) | 15 | 30 |
| 2 | ಮೂಲ ವೃತ್ತಿ, ಕೂಲಿಕೆಲಸ, ಮನೆಗೆಲಸ ಮತ್ತು ಜಮೀನಿನ ಕೆಲಸ | 28 | 56 |

| | | | |
|---|---|---|---|
| 3 | ಮನೆಕೆಲಸ ಮತ್ತು ಜಮೀನಿನ ಕೆಲಸ | 07 | 14 |
| **4** | **ಒಟ್ಟು** | **50** | **100** |

ಕೋಷ್ಟಕ 4 ರಲ್ಲಿ ಅಧ್ಯಯನಕ್ಕೊಳಪಟ್ಟ ವ್ಯಕ್ತಿಗಳ ವೃತ್ತಿ ವಿವರವನ್ನು ನೀಡಲಾಗಿದೆ. ಕೋಷ್ಟಕದ ಪ್ರಕಾರ ಶೇ.30 ರಷ್ಟು ತಮ್ಮ ಮೂಲವೃತ್ತಿಯನ್ನು ಬಿದಿರುನಿಂದ ಅಂದರೆ ಕಿರುಬಿದಿರು (ಕರ್‌ಗಾಯ್ಲಿ), ಹೆಬ್ಬಿದಿರು (ಪ್ಯರ್‌ಗಾಯ್ಲಿ) ಕುಕ್ಕೆ, ಬುಟ್ಟಿ, ಮೀನು ಹಿಡಿಯುವ ತಡಿಕೆ, ಗೆರ್ಸಿ ಮುಂತಾದ ಸಾಮಾಗ್ರಿಗಳನ್ನು ಹೆಣೆದು ತಮಗೆ ಎಷ್ಟು ಬೇಕೋ ಅಷ್ಟನ್ನು ಇಟ್ಟುಕೊಂಡು ಅಕ್ಕಪಕ್ಕದ ಗ್ರಾಮಗಳಿಗೆ ಹೋಗಿ ಅಗ್ಗದ ಬೆಲೆಗೆ ಮಾರಾಟ ಮಾಡುತ್ತಿದ್ದರು. ಇಂದು ಅರಣ್ಯದೊಳಗೆ ಪ್ರವೇಶ ನಿಷೇಧವಿರುವುದರಿಂದ ಇವರು ಮೂಲವೃತ್ತಿಯನ್ನು ಕೈ ಬಿಟ್ಟಿರುತ್ತಾರೆ. ಹಿಂದೆ ಮೂಲವೃತ್ತಿಯ ಜೊತೆಗೆ ಇನ್ನಿತರೆ ವೃತ್ತಿಗಳು ಕಂಡು ಬರುತ್ತಿದ್ದು, ಶೇ 56 ರಷ್ಟು ಮೂಲ ವೃತ್ತಿಯ ಜೊತೆಗೆ ಕೂಲಿ ಕೆಲಸ, ಮನೆಕೆಲಸ ಹಾಗೂ ಜಮೀನಿನ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದು, ಕೂಲಿ ಕೆಲಸಕ್ಕೆ ಹೋಗುವಾಗ ಹಿಂದೆ ಐದು ರೂಪಾಯಿಯನ್ನು ಕೊಡುತ್ತಿದ್ದರು, ಇಲ್ಲಿ ಪುರುಷರು ತಮ್ಮ ಪೋಷಕರೊಟ್ಟಿಗೆ ತಾವು ಕೂಡ ಕೂಲಿಯಾಳುಗಳಾಗಿ ಜೀತ ಕೆಲಸಗಳನ್ನು ಚಿಕ್ಕ ವಯಸ್ಸಿನಲ್ಲಿ ಮಾಡುತ್ತಿದ್ದು, ತಾವು ಕೆಲಸ ಮಾಡುವ ಗ್ರಾಮಸ್ಥರ ಮನೆಗಳಲ್ಲಿ ಇದ್ದು ಬೆಳಿಗ್ಗೆ ಎದ್ದು ದನದ ಕೊಟ್ಟಿಗೆ ಸ್ವಚ್ಚಗೊಳಿಸಿ ನಂತರ ಇನ್ನಿತರೆ ಕೆಲಸಗಳನ್ನು ಮಾಡುತ್ತಿದ್ದರು. ಮಹಿಳೆಯರನ್ನು ಬೆಳಿಗ್ಗೆ 7.30 ಯಿಂದ ಸಂಜೆ 6 ಗಂಟೆಯ ತನಕ ದುಡಿಸಿಕೊಳ್ಳುತ್ತಿದ್ದರು. ಕೆಲಸ ಬೇಗ ಮುಗಿಸಿ ಎಂದು ಇವರ ಮೇಲೆ ಒತ್ತಡ ಹಾಕಿ ಕೆಲಸ ಮುಗಿಯುವವರೆಗೂ ಬಿಡುತ್ತಿರಲಿಲ್ಲ. ಕೆಲವೊಮ್ಮೆ ಕೆಲಸ ಮುಗಿಸಿ ಮನೆಗೆ ಹಿಂತಿರುಗುವುದು 7 ಗಂಟೆಯಾಗುತ್ತಿತ್ತು. ಇಂದಿಗೂ ಹೆಚ್ಚಿನ ಮಂದಿ ಕೂಲಿ ಕೆಲಸಗಳಲ್ಲಿ ತೊಡಗಿದ್ದು ಮಹಿಳೆಯರಿಗೆ ಕೂಲಿ 200 ರಿಂದ 250 ಹಾಗೂ ಪುರುಷರಿಗೆ 350–400 ಆಗಿದ್ದು, ಬೆಳಿಗ್ಗೆ 8ರಿಂದ ಸಂಜೆ 5.30 ತನಕ ಕೆಲಸ ಕಂಡು ಬಂದಿದ್ದು, ಊಟದ ಅವಧಿಯಲ್ಲಿ ಹದಿನೈದು ನಿಮಿಷ, ಅರ್ಧಗಂಟೆಗಳ ಕಾಲ ವಿರಾಮ ನೀಡುತ್ತಾರೆಂದು ಹೇಳಿರುತ್ತಾರೆ. ಬೇಸಿಗೆಯಲ್ಲಿ ಕೂಲಿ ಕೆಲಸ ಸಿಗದಿದ್ದಾಗ ಕಾಡಂಚಿನಲ್ಲಿರುವ/ಗ್ರಾಮದ ಅಕ್ಕಪಕ್ಕ ಜಮೀನಿನಲ್ಲಿರುವ ರೋಜಗಿಡ, ಹತ್ತಿಗಿಡಗಳನ್ನು ಸಂಗ್ರಹಿಸುವುದು, ಶುಂಠಿಗಳನ್ನು, ಗೇಲ್‌ಗಳನ್ನು ಸಂಗ್ರಹಿಸುವುದರ ಜೊತೆಗೆ ಹಳ್ಳ, ಕೆರೆ, ತೊರೆಗಳಿಗೆ ಹೋಗಿ ನಳ್ಳಿ, ಮೀನು ಹಿಡಿಯುವುದನ್ನು ಕಾಣುತ್ತೇವೆ.

**ಕೋಷ್ಟಕ 5: ಅಧ್ಯಯನಕ್ಕೆ ಒಳಪಟ್ಟ ವ್ಯಕ್ತಿಗಳ ಕುಟುಂಬದ ವಾರ್ಷಿಕ ಆದಾಯ**

| ಕ್ರ.ಸಂ | ವಾರ್ಷಿಕ ಆದಾಯ | ಸಂಖ್ಯೆ | ಶೇಕಡ |
|---|---|---|---|
| 1 | 10 ಸಾವಿರಕ್ಕಿಂತ ಕಡಿಮೆ | 20 | 40 |
| 2 | 15–20 ಸಾವಿರ | 25 | 50 |
| 3 | 30 ಸಾವಿರಕ್ಕಿಂತ ಅಧಿಕ | 05 | 10 |
| **4** | **ಒಟ್ಟು** | **50** | **100** |

ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಬೆಟ್ಟಕುರುಬ ಸಮುದಾಯದ ಕುಟುಂಬದ ವಾರ್ಷಿಕ ಆದಾಯವನ್ನು ಗಮನಿಸಿದಾಗ ಶೇ 40 ರಷ್ಟು 10 ಸಾವಿರಕ್ಕಿಂತ ಕಡಿಮೆ ಆದಾಯವನ್ನು ಹೊಂದಿದ್ದವರಾಗಿದ್ದು, ಶೇ 50 ರಷ್ಟು 15–20 ಸಾವಿರ ವಾರ್ಷಿಕ ಆದಾಯವನ್ನು ಹೊಂದಿರುವುದನ್ನು ಗಮನಿಸಬಹುದಾಗಿದೆ. ಶೇ 10 ರಷ್ಟು ಜನರು ಮಾತ್ರ 30 ಸಾವಿರಕ್ಕಿಂತ ಅಧಿಕ ವಾರ್ಷಿಕ ಆದಾಯವನ್ನು ಹೊಂದಿದ್ದಾರೆ.

**ಕೋಷ್ಟಕ 6: ಕೃಷಿ ಭೂಮಿ ಹೊಂದಿರುವವರ ವಿವರ**

| ಕ್ರ.ಸಂ | ಕೃಷಿ ಭೂಮಿ | ಸಂಖ್ಯೆ | ಶೇಕಡ |
|---|---|---|---|
| 1 | ಒಣ ಭೂಮಿ | 31 | 62 |
| 2 | ನೀರಾವರಿ ಭೂಮಿ | 14 | 28 |
| 3 | ಭೂಮಿ ಇಲ್ಲದಿರುವುದು | 05 | 10 |
| **5** | **ಒಟ್ಟು** | **50** | **100** |

ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಶೇ.62 ರಷ್ಟು ಮಂದಿ ತಮಗೆ ಒಣಭೂಮಿ ಕಂಡು ಬಂದಿದೆ

ಎಂದು ಹೇಳಿದ್ದು, ತಮ್ಮ ಹೆಸರಿನಲ್ಲಿ, ಪೋಷಕರ ಹೆಸರಿನಲ್ಲಿ, ಮಕ್ಕಳ ಹೆಸರಿನಲ್ಲಿ ಹಾಗೂ ಕುಟುಂಬದ ಇತರ ಸದಸ್ಯರ ಹೆಸರಿನಲ್ಲಿ ಇರುವುದಾಗಿ ಹೇಳಿರುತ್ತಾರೆ. ಆದರೆ ವಿಧವೆ ಮಹಿಳೆಯರು ಭೂಮಿಯ ಖಾತೆಯನ್ನು ತಮ್ಮ ಹೆಸರಿಗೆ ಮಾಡಿಸಿರುತ್ತಾರೆ. ಮಳೆಯನ್ನೆ ನಂಬಿ ಕೃಷಿ ಬೆಳೆಯುವವರ ಸಂಖ್ಯೆ ಅಧಿಕವಾಗಿದ್ದು, ಭೂಮಿ ಇಲ್ಲದಿರುವವರು ಶೇ 05 ರಷ್ಟು ಕಂಡು ಬಂದಿದ್ದು, ತಮ್ಮ ಜೀವನೋಪಾಯಕ್ಕೆ ಕೂಲಿ ಕೆಲಸದಲ್ಲಿ ತೊಡಗಿರುವುದನ್ನು ಕಾಣುತ್ತೇವೆ.

**ಆರೋಗ್ಯದ ವಿವರ**

ಹಿಂದೆ ಈ ಸಮುದಾಯದವರಲ್ಲಿ ಆರೋಗ್ಯದ ಸ್ಥಿತಿಗತಿಗಳು ಉತ್ತಮವಾಗಿತ್ತು. ಇವರು ಕಾಡಿನಲ್ಲೇ ವಾಸವಿದ್ದು ಕಾಡಿನಲ್ಲಿ ದೊರೆಯುವ ಅರಣ್ಯೋತ್ಪನ್ನಗಳನ್ನು ತಿಂದು ಜೀವನವನ್ನು ನಡೆಸುತ್ತಿದ್ದರು. ಇವರು ಪ್ರಾಕೃತಿಕವಾಗಿ ಸಿಗುತ್ತಿದ್ದ ಆಹಾರ ಪದಾರ್ಥಗಳನ್ನು ಅತಿ ಹೆಚ್ಚು ಸೇವಿಸುತ್ತಿದ್ದರು. ಆರೋಗ್ಯದ ಸಮಸ್ಯೆಗಳು ಕಂಡು ಬಂದರೆ ಆ ಖಾಯಿಲೆಗೆ ತಕ್ಕಂತೆ ಗಿಡ ಮೂಲಿಕೆ ಅಥವಾ ನಾಟಿ ಔಷಧಿಗಳನ್ನು ಕುಡಿದು ಗುಣಮುಖರಾಗುತ್ತಿದ್ದರು.

**ಕೋಷ್ಟಕ 7: ಆರೋಗ್ಯದ ವಿವರ**

| ಕ್ರ.ಸಂ | ಆರೋಗ್ಯದ ಸಮಸ್ಯೆಗಳು | ಸಂಖ್ಯೆ | ಶೇಕಡವಾರು |
|---|---|---|---|
| 1 | ಆರೋಗ್ಯದಲ್ಲಿ ಸಮಸ್ಯೆ ಹೊಂದಿರುವವರು | 30 | 60 |
| 2 | ಆರೋಗ್ಯದಲ್ಲಿ ಸಮಸ್ಯೆ ಇಲ್ಲದಿರುವವರು | 20 | 40 |
| **3** | **ಒಟ್ಟು** | **50** | **100** |

ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಶೇ 60 ರಷ್ಟು ಮಂದಿ ತಮಗೆ ಬಿ.ಪಿ, ಶುಗರ್, ಅಸ್ತಮಾ ಹಾಗೂ ಹೊಟ್ಟೆನೋವು, ಎದೆನೋವು, ಮೈಕೈನೋವು ಹಾಗೂ ಗರ್ಭಕೋಶದ ಆಪರೇಷನ್ ಹೀಗೆ ಮೊದಲಾದ ಆರೋಗ್ಯ ಸಮಸ್ಯೆಗಳು ಇರುವುದಾಗಿ ಹೇಳಿದ್ದು, ಶೇ 40 ರಷ್ಟು ಮಂದಿ ತಮಗೆ ಸಣ್ಣಪುಟ್ಟ ಖಾಯಿಲೆಗಳು ಕಂಡು ಬಂದರೆ ಅಂಗಡಿಯಲ್ಲಿ ಮಾತ್ರೆ ತರಿಸಿ ಗುಣಮುಖರಾಗುತ್ತೇವೆ ಹೊರತು ಆಸ್ಪತ್ರೆಗೆ ಹೋಗುವುದಿಲ್ಲ ಎಂದು ಹೇಳಿರುತ್ತಾರೆ. ಪುನರ್ವಸತಿಕರಣದ ನಂತರ ಈ ಸಮುದಾಯದ ಜನರಲ್ಲಿ ಕೆಲವರು ಆಸ್ಪತ್ರೆಗೆ ಹೋಗುವುದನ್ನು ರೂಢಿಸಿಕೊಂಡಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಪುನರ್ವಸತಿಕರಣಕ್ಕೆ ಮುಂಚೆ ಇವರಿಗೆ ಆರೋಗ್ಯದ ಸಮಸ್ಯೆಗಳು ಕಂಡು ಬರುತ್ತಿದ್ದದ್ದು ಅತಿ ವಿರಳವಾಗಿತ್ತು. ಪ್ರಕೃತಿದತ್ತವಾಗಿ ಸಿಗುವ ಆಹಾರ ಪದಾರ್ಥಗಳನ್ನು ಇವರು ಸೇವಿಸುತ್ತಿದ್ದರಿಂದ ಇವರಿಗೆ ಅನಾರೋಗ್ಯಗಳು ಕಂಡು ಬರುತ್ತಿರಲಿಲ್ಲ. ಪುನರ್ವಸತಿಕರಣದ ನಂತರ ಇವರ ಆಹಾರದಲ್ಲಿ ಬದಲಾವಣೆಗಳು ಕಂಡು ಬಂದಿರುವುದರಿಂದ ಅವು ಅವರ ಆರೋಗ್ಯದ ಮೇಲೂ ಕೂಡ ಪರಿಣಾಮವನ್ನುಂಟು ಮಾಡುತ್ತಿದೆ.

**ಸಾಂಸ್ಕೃತಿಕ ಆಚರಣೆಗಳು ಹಾಗೂ ಧಾರ್ಮಿಕ ಪದ್ಧತಿ**

ಇವರಲ್ಲಿ ತಮ್ಮದೇ ಆದ ಸಾಂಸ್ಕೃತಿಕ ಆಚರಣೆಗಳನ್ನು ಕಾಣುತ್ತೇವೆ. ಇವರಲ್ಲಿ ಅಂಬಾಲವು ದೇವಸ್ಥಾನಕ್ಕಿಂತಲ್ಲೂ ಮಹತ್ವದ ಸ್ಥಾನವನ್ನು ಪಡೆದುಕೊಂಡಿರುತ್ತದೆ. ಇಲ್ಲಿಯೇ ಶುಭ ಹಾಗೂ ಅಶುಭ ಕಾರ್ಯಗಳು ಕಂಡು ಬರುತ್ತವೆ. ಉದಾ:– ಮದುವೆಕಾರ್ಯ, ತಿಥಿಕಾರ್ಯ ಮೊದಲಾದವುಗಳು. ಜೊತೆಗೆ ನ್ಯಾಯ ಪಂಚಾಯಿತಿಯು ಇಲ್ಲಿಯೇ ನಡೆಯುತ್ತದೆ. ಆದರೆ ಹಿಂದೆ ಅಂಬಾಲದ ನಿರ್ಮಾಣವು ಮಣ್ಣಿನ ಗೋಡೆಗಳಿಂದ ನಿರ್ಮಿಸಿಕೊಳ್ಳುತ್ತಿದ್ದರು. ಆದರೆ ಇಂದು ಅಂಬಾಲವನ್ನು ಸರ್ಕಾರದವರು ಸೀಮೆಂಟ್ ಗೋಡೆಗಳಿಂದ ನಿರ್ಮಿಸಿರುವುದನ್ನು ಕಾಣುತ್ತೇವೆ. ಆದರೆ ಪುನರ್ವಸತಿಯ ನಂತರ ತಮ್ಮ ಸಂಪ್ರದಾಯಿಕ ಹಬ್ಬಗಳು, ನೃತ್ಯಗಳು, ಹೆಣ್ಣುಮಕ್ಕಳು

ಹಣೆಯ ಕಡೆಗೆ, ಕಣ್ಣಿನ ಕಡೆಗೆ, ನೆತ್ತಿಗೆ, ಕೈಗಳಿಗೆ ಅಚ್ಚೆ/ಹಸಿರನ್ನು ಹಾಕಿಸಿಕೊಳ್ಳುತ್ತಿದ್ದ ಪದ್ಧತಿಯು ಇಲ್ಲವಾಗಿದೆ. ಹಾಗೆಯೇ ಇಲ್ಲಿನ ಮಹಿಳೆಯರು ತಮ್ಮ ಸಂಪ್ರದಾಯಿಕ ಉಡುಪನ್ನು ವಯಸ್ಸಾದ ಮಹಿಳೆಯರು ಧರಿಸಿದವರಾಗಿದ್ದು ಮಧ್ಯಮ ವಯಸ್ಸಿನ ಮಹಿಳೆಯರು ಸೀರೆ, ಚೂಡಿದಾರ್, ನೈಟಿ ಇವುಗಳನ್ನು ತಮ್ಮ ದಿನನಿತ್ಯದ ಉಡುಪಾಗಿ ಅಳವಡಿಸಿಕೊಳ್ಳುತ್ತಿದ್ದಾರೆ. ಬೆಟ್ಟಕುರುಬ ಸಮುದಾಯದ ಪುರುಷರು ಯುಗಾದಿ ಹಬ್ಬದ ಸಂದರ್ಭದಲ್ಲಿ ಅಕ್ಕಪಕ್ಕದ ಹಾಡಿಯಲ್ಲಿರುವ ಸಂಬಂಧಿಕರನ್ನು ಕರೆಸಿ ಕೊಳಲು, ಡೋಲುಗಳನ್ನು ಬಾರಿಸಿ ನೃತ್ಯ ಮಾಡುತ್ತಿದ್ದ ಪದ್ಧತಿಯು ಕಡಿಮೆಯಾಗಿವೆ ಅಥವಾ ನಶಿಸಿ ಹೋಗುವ ಹಂತಕ್ಕೆ ಬಂದಿದೆ ಎಂದರೂ ತಪ್ಪಾಗಲಾರದು.

**ಸಮಸ್ಯೆಗಳು**

- ಗಿಡ–ಮರಗಳು, ಪ್ರಾಣಿ–ಪಕ್ಷಿಗಳ ಸಂಕುಲದ ಬಗ್ಗೆ ಇದ್ದ ಪರಿಚಯವು ಇಂದು ಇಲ್ಲವಾಗಿದೆ. ಜೊತೆಗೆ ಯಾವ ತಿಂಗಳಿನಲ್ಲಿ ಯಾವ ಮಳೆ, ಗೆಡ್ಡೆಗೆಣಸು, ಹಣ್ಣುಗಳು, ಅಣಬೆಗಳ ಬಗೆಗೆ ಗಾಢವಾದ ಅಥವಾ ಆಳವಾದ ಅರಿವು ಕಡಿಮೆಯಾಗಿರುವುದು.
- ಸ್ತ್ರೀ ಮತ್ತು ಪುರುಷರ ಪರಸ್ಪರ ಸಮಾನತೆಯಿಂದ ತೊಡಗಿಸಿಕೊಂಡ ಪೂರಕ ಕುಲಕಸುಬುಗಳು ಪುನರ್ವಸತಿಕರಣದಿಂದ ಸ್ತ್ರೀ ಮತ್ತು ಪುರುಷರ ವೃತ್ತಿಯು ವಿಂಗಡಣೆಯಾಯಿತು. ಇದರ ಜೊತೆಗೆ ಮಣ್ಣಿನ ಗೋಡೆಗಳಲ್ಲಿ ಮಹಿಳೆಯರು ಬಿಡಿಸುತ್ತಿದ್ದ ಚಿತ್ರಕಲೆಗಳು ಮರೆಯಾದವು.
- ಪುನರ್ವಸತಿಯ ನಂತರ ಸ್ತ್ರೀಯರ ಮೇಲೆ ನಡೆಯುವ ದೌರ್ಜನ್ಯಗಳ ಸಂಖ್ಯೆ ಅಧಿಕವಾಗುತ್ತ ಬಂದಿತು. ಆಕೆಯು ತನ್ನ ಕುಟುಂಬದಲ್ಲಿ ಶೋಷಣೆಗೆ ಒಳಗಾಗುವುದರ ಜೊತೆಗೆ ಹೊರಗಿನ ಪ್ರಪಂಚದ ಕೂಲಿ ಕೆಲಸ ಮಾಡುವ ಸ್ಥಳಗಳಲ್ಲಿಯೂ ಶೋಷಣೆಗೆ ಒಳಗಾಗುವುದನ್ನು ಕಾಣುತ್ತೇವೆ. ಕಾಡುಪ್ರಾಣಿಗಳು ಇವರ ಜಮೀನಿಗೆ ಬಂದು ಬೆಳೆಗಳನ್ನು ನಾಶ ಪಡಿಸುತ್ತಿವೆ.
- ಹಣದ ಸಮಸ್ಯೆಯಿಂದಾಗಿ ಉಳಿತಾಯ ಸಂಘದ ಸದಸ್ಯತ್ವವನ್ನು ಅರ್ಧದಲ್ಲಿಯೇ ಕೈ ಬಿಟ್ಟಿರುವ ಪ್ರಸಂಗಗಳು ಕಂಡು ಬಂದಿವೆ.
- ಇಂದಿಗೂ ಕೂಡ ಪೋಷಕರು ತಮ್ಮ ಮಕ್ಕಳನ್ನು ಶಾಲೆ ಬಿಡಿಸಿ ಕೂಲಿ ಕೆಲಸಗಳಿಗೆ ಕರೆದುಕೊಂಡು ಹೋಗುತ್ತಿದ್ದಾರೆ.
- ದೇವರಗುಡ್ಡರ ಹೆಸರಿನಲ್ಲಿ ಶಾಲೆ ಬಿಡುವವರ ಪ್ರಮಾಣವು ಬಾಲಕಿಯರಿಗಿಂತ ಬಾಲಕರೇ ಹೆಚ್ಚಾಗಿವೆ.
- ಆರೋಗ್ಯದ ವಿಚಾರಕ್ಕೆ ಬಂದರೆ ಪುರುಷರು ಮದ್ಯಪಾನ, ಧೂಮಪಾನ, ಗುಟುಕ ಚಟಗಳಿಗೆ ಒಳಗಾದರೆ, ಮಹಿಳೆಯರು ಎಲೆಅಡಿಕೆ, ಹೊಗೆಸೊಪ್ಪು, ಟೀ, ಗುಟುಕ ಚಟಗಳಿಗೆ ಒಳಗಾಗಿ ಮಾರಕವಾದ ಕ್ಯಾನ್ಸರ್ ಖಾಯಿಲೆಗೆ ತುತ್ತಾಗುತ್ತಿದ್ದಾರೆ. ಹಾಗೆಯೇ ಈ ಸಮುದಾಯದಲ್ಲಿ ಗರ್ಭಿಣಿಯರು, ಬಾಣಂತಿಯರು, ಮಕ್ಕಳು ಅಪೌಷ್ಠಿಕತೆಯಿಂದ ಬಳಲುತ್ತಿದ್ದು, ಆಸ್ಪತ್ರೆಗಳಿಗೆ ಹೋಗದೆ ಹಾಗೂ ಒಳ್ಳೆಯ ಪೌಷ್ಟಿಕಾಂಶಯುಕ್ತ ಆಹಾರವನ್ನು ತೆಗೆದುಕೊಳ್ಳದೆ ದೇವರ ಮೊರೆ ಹೋಗಿ ತಮ್ಮ ಜೀವ, ಮಕ್ಕಳ ಜೀವ, ಕುಟುಂಬದವರ ಜೀವವನ್ನು ಬಲಿ ಕೊಡುವ ಪ್ರಸಂಗಗಳು ಇಂದಿಗೂ ನಡೆಯುತ್ತಿವೆ. ಇದರ ಜೊತೆಗೆ ಇತ್ತೀಚಿನ ದಿನಗಳಲ್ಲಿ ಕೆಲವರು ಬಿ.ಪಿ. ಶುಗರ್, ಅಸ್ತಮಾ ಹೀಗೆ ಮೊದಲಾದ ಖಾಯಿಲೆಗಳಿಗೆ ತುತ್ತಾಗುತ್ತಿರುವುದನ್ನು ಕಾಣುತ್ತೇವೆ.
- ಈ ಸಮುದಾಯದವರಲ್ಲಿ ಇಂದಿಗೂ ಬಾಲ್ಯ ವಿವಾಹ ಪದ್ಧತಿ ಅಸ್ಥಿತ್ವದಲ್ಲಿದೆ.

- ಪುನರ್ವಸತಿಕರಣಕ್ಕೆ ಒಳಗಾದ ಹಾಡಿಗಳಲ್ಲಿ ವಸತಿ ಸಮಸ್ಯೆಗಳು ಕಂಡು ಬಂದಿದ್ದು, ಒಂದು ಮನೆಯಲ್ಲಿ ಎರಡು ಮೂರು ಸಂಸಾರಗಳು ಒಟ್ಟಿಗೆ ವಾಸಿಸುವುದನ್ನು ಕಾಣುತ್ತೇವೆ.
- ಪುನರ್ವಸತಿಕರಣಕ್ಕೆ ಒಳಪಟ್ಟ ಕುಟುಂಬದವರ ಜೊತೆಗೆ ಅವರ ಸಂಬಂಧಿಕರು ಕೂಡ ಬಂದು ವಾಸಿಸುತ್ತಿದ್ದು, ಅವರು ವಸತಿ ಸಮಸ್ಯೆ ಹಾಗೂ ಮೂಲ ದಾಖಲಾತಿಯು ತಾವು ಹಿಂದೆ ವಾಸಿಸುತ್ತಿದ್ದ ಹಾಡಿಗಳಲ್ಲಿ ಕಂಡು ಬಂದಿದ್ದು ಅವರು ತಮ್ಮ ಸೌಲಭ್ಯಗಳನ್ನು ಪಡೆಯಲು ಆ ಹಾಡಿಗೆ ಹೋಗಬೇಕಾಗಿದ್ದು, ವಯಸ್ಸಾದವರು ದೂರದ ಊರಿಗೆ ಪಯಣ ಬೆಳೆಸಲು ಸಾಧ್ಯವಾಗದೆ ತಮಗೆ ಸಿಗುವ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಉದಾಹರಣೆಗೆ, ಪಿಂಚಣಿ ಸೌಲಭ್ಯ, ಪೌಷ್ಟಿಕ ಆಹಾರ ಇತ್ಯಾದಿ.
- ಇವರು ಇಂದಿಗೂ ಕೂಡ ಸಾರಿಗೆ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕೆಲವೊಂದು ಹಾಡಿಗಳಿಗೆ ಸರ್ಕಾರಿ ವಾಹನಗಳಿಗೆ ಬದಲಾಗಿ ಖಾಸಗಿ ವಾಹನಗಳು ಕಂಡು ಬಂದಿದ್ದು, ತಮ್ಮ ಆಟೋರಿಕ್ಷಾಗಳನ್ನು ಬಿಡಲು ಸೀಟು ಭರ್ತಿಯಾಗಿರಬೇಕು ಇಲ್ಲದಿದ್ದರೆ ಬಿಡುವುದಿಲ್ಲ. ಈ ತೊಂದರೆಗಳನ್ನು ದಿನನಿತ್ಯ ಶಾಲಾ/ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳು ಅನುಭವಿಸುತ್ತಿದ್ದಾರೆ.
- ಅವರ ಸಾಂಸ್ಕೃತಿಕ ಆಚರಣೆಗಳು ಹಾಗೂ ಧಾರ್ಮಿಕ ನಂಬಿಕೆಗಳು ನಶಿಸಿ ಹೋಗುತ್ತಿವೆ.
- ಸತ್ತಿರುವ ಪೂರ್ವಜರು ತಮ್ಮ ಜೊತೆ ಇದ್ದಾರೆಂಬ ನಂಬಿಕೆಯಲ್ಲಿ ಇದ್ದ ಜನರಿಗೆ ಪುನರ್ವಸತಿಕರಣವು ದಿಗಿಲನ್ನು ಹುಟ್ಟಿಸಿತು. ಇದರ ಜೊತೆಗೆ ತಮ್ಮ ಕುಲದ ನೆಲೆಯನ್ನು ಕಳೆದುಕೊಂಡು ಬೇರೆಡೆಗೆ ಹೋಗುವ ಸನ್ನಿವೇಶವು ಒದಗಿದೆ.
- ಈ ಸಮುದಾಯದಲ್ಲಿ ಬೆರಳೆಣಿಕೆಯಷ್ಟು ಮಂದಿ ವಿಧ್ಯಾಭ್ಯಾಸ ಮಾಡಿದ ಯುವಕ/ಯುವತಿಯರು ಉದ್ಯೋಗದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

**ಪರಿಹಾರೋಪಾಯ ಕ್ರಮಗಳು**

- ಅರಣ್ಯದೊಳಗೆ ಅವರು ಭಾವನಾತ್ಮಕವಾದ ಸಂಬಂಧವನ್ನು ಇಟ್ಟುಕೊಂಡಿರುವುದರಿಂದ ಆ ಭಾವನಾತ್ಮಕ ನಂಟನ್ನು ಮುಂದುವರಿಸಲು ಅವಕಾಶಗಳಿರಬೇಕು.
- ಮೂಲ ವೃತ್ತಿ ಹಾಗೂ ಕುಂಬ್ರಿ ಬೇಸಾಯದ ಪದ್ಧತಿ, ಗುಡಿಸಲು ನಿರ್ಮಾಣ ಹೀಗೆ ಮೊದಲಾದ ವೃತ್ತಿಗಳಲ್ಲಿ ಮಹಿಳೆಯರು ಹಾಗೂ ಪುರುಷರು ಒಂದುಗೂಡಿ ಆ ವೃತ್ತಿಯನ್ನು ಕೈಗೊಳ್ಳುವಂತೆ ಪ್ರೇರೇಪಿಸಬೇಕು.
- ಕುಟುಂಬದ ಒಳಗೆ ಹಾಗೂ ಹೊರಗೆ ನಡೆಯುವ ಶೋಷಣೆಗಳು, ದೌರ್ಜನ್ಯಗಳ ವಿರುದ್ಧ ಮಹಿಳೆಯರು ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಸ್ವ ಅರಿವು ಮೂಡಿಸುವ ಕಾರ್ಯಯೋಜನೆಯ ಅಗತ್ಯವಿದೆ.
- ಅರಣ್ಯ ಇಲಾಖೆಯಿಂದ ಹಾನಿಗೊಳಗಾದ ಕುಟುಂಬಗಳಿಗೆ ಬೆಳೆ ಪರಿಹಾರವು ದೊರಕುವಂತಾಗಬೇಕು.
- ಸಂಘ ಬಿಟ್ಟಿರುವ ಮಹಿಳೆಯರನ್ನು ಗುರುತಿಸಿ ಅವರು ಮತ್ತೆ ಉಳಿತಾಯ ಸಂಘವನ್ನು ಮುಂದುವರೆಸಿಕೊಂಡು ಹೋಗುವಂತೆ ಪ್ರೇರೇಪಿಸಬೇಕಾಗಿದೆ.
- ಶಾಲೆ ಬಿಡುವ ಮಕ್ಕಳನ್ನು ಮರಳಿ ಶಾಲೆಗೆ ಕಳುಯಿಸುವಂತೆ ಪೋಷಕರಿಗೆ ಶಿಕ್ಷಕರು ಮನವೊಲಿಸಬೇಕು ಹಾಗೂ ಆ ಮಕ್ಕಳಿಗೆ ಪರೀಕ್ಷೆ ಬರೆಯಲು ಅವಕಾಶವನ್ನು ಕಲ್ಪಿಸಿಕೊಡಬೇಕು.

- ಮೌಢ್ಯತೆಗೆ ಒಳಗಾದ ಮಕ್ಕಳು ತಮ್ಮ ಪ್ರಭಾವದಿಂದ ಸಮುದಾಯದ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡುತ್ತಿದ್ದಾರೆ. ಇಂತಹ ಹಾಡಿಗಳಿಗೆ ಶೈಕ್ಷಣಿಕ ಅಧಿಕಾರಿಗಳು ಭೇಟಿ ನೀಡಿ ಅವರಿಗೆ ಮನವರಿಕೆ ಮಾಡಬೇಕು.
- ಆರೋಗ್ಯದ ವಿಚಾರಕ್ಕೆ ಸಂಬಂಧಿಸಿದಂತೆ ಇನ್ನು ಹೆಚ್ಚು ಕಾರ್ಯಕ್ರಮಗಳು ಆಸ್ಪತ್ರೆಯ ವತಿಯಿಂದ ಜರುಗಬೇಕು.
- ಬಾಲ್ಯ ವಿವಾಹವು ಆರೋಗ್ಯದ ಮೇಲೆ ನಕಾರತ್ಮಕವಾದ ಪರಿಣಾಮವನ್ನು ಉಂಟು ಮಾಡುತ್ತದೆ ಎಂಬ ಅರಿವು ಮೂಡಿಸಬೇಕು.
- ವಸತಿ ಸಮಸ್ಯೆಗಳಿಗೆ ಒಳಗಾದ ಹಾಡಿಗಳಿಗೆ ಸರ್ಕಾರವು ಪ್ರತ್ಯೇಕವಾದ ಎಲ್ಲ ಸವಲತ್ತುಗಳಿರುವ ವಸತಿ ಸೌಕರ್ಯವನ್ನು ಒದಗಿಸಿಕೊಡಬೇಕು.
- ಇವರು ವಾಸಿಸುವ ಹಾಡಿಗಳಲ್ಲಿಯೇ ಮೂಲಭೂತ ಸೌಕರ್ಯ ದೊರಕಬೇಕು.
- ಸರ್ಕಾರವು ಇವರ ಹಾಡಿಗಳಿಗೆ ಪ್ರತ್ಯೇಕವಾದ ಶಾಲಾ ವಾಹನವನ್ನು ಏರ್ಪಡಿಸಿದರೆ ಆ ಹಾಡಿಯ ಮಕ್ಕಳಿಗೆ ಒಳ್ಳೆಯ ಅನುಕೂಲವಾಗುತ್ತದೆ.
- ಸಾಂಸ್ಕೃತಿಕ ಹಾಗೂ ಧಾರ್ಮಿಕ ಪದ್ಧತಿಗಳನ್ನು ಮುಂದಿನ ಪೀಳಿಗೆಯವರು ಕೂಡ ಮೈಗೂಡಿಸಿಕೊಳ್ಳುವಂತಹ ಪರಿಸರವನ್ನು ಬೆಳೆಸಬೇಕು
- ಬುಡಕಟ್ಟು ಸಮುದಾಯದವರಿಗೆ ಅವರು ವಾಸಿಸುವ ಪ್ರದೇಶಗಳಲ್ಲಿಯೇ ಅವರಿಗೆ ಪುನರ್ವಸತಿಕರಣದ ಸೌಲಭ್ಯವನ್ನು ಕಲ್ಪಿಸಿಕೊಡಬೇಕು.
- ಅರಣ್ಯ ಇಲಾಖೆಗಳಲ್ಲಿ ಬುಡಕಟ್ಟು ಸಮುದಾಯದವರಿಗೆ ಉದ್ಯೋಗದಲ್ಲಿ ಮೀಸಲಾತಿ ಇರುವಂತೆ ಇನ್ನುಳಿದ ಕ್ಷೇತ್ರಗಳಲ್ಲಿಯೂ ಕೂಡ ಅವರಿಗೆ ಉದ್ಯೋಗದಲ್ಲಿ ಮೀಸಲಾತಿ ದೊರಕಬೇಕು.

**ಉಪಸಂಹಾರ**

ಬೆಟ್ಟಕುರುಬ ಸಮುದಾಯದವರನ್ನು ಪುನರ್ವಸತಿಕರಣಕ್ಕೆ ಒಳಪಟ್ಟರೂ ಕೂಡ ಅವರು ತಮ್ಮ ಮೂಲಭೂತ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ಇಂದಿಗೂ ಕೂಡ ವಿಫಲರಾಗುತ್ತಿದ್ದಾರೆ. ತಮ್ಮ ಜೀವನೋಪಾಯಕ್ಕೆ ಕೂಲಿ ಕೆಲಸಗಳಿಗೆ ಬೇರೆಡೆಗೆ ವಲಸೆ ಹೋಗುವುದನ್ನು ಕಾಣುತ್ತೇವೆ. ಇವರಲ್ಲಿ ಬಾಲ್ಯ ವಿವಾಹ ಪದ್ಧತಿಯು ಅಸ್ಥಿತ್ವದಲ್ಲಿದ್ದು, ಕೆಲವು ಹಾಡಿಗಳಲ್ಲಿ ಬಾಲ್ಯ ವಿವಾಹವಾದವರ ವಿರುದ್ಧ ಕೇಸ್‌ಗಳು ಕಂಡು ಬಂದಿದ್ದು, ಅವರು ಜೈಲಿನಲ್ಲಿ ಶಿಕ್ಷೆ ಅನುಭವಿಸಿರುತ್ತಿರುವುದನ್ನು ಕಾಣುತ್ತೇವೆ. ಇಂದಿಗೂ ಕೆಲವರು ಆಧಾರ್‌ಕಾರ್ಡ್, ಪಡಿತರ ಚೀಟಿ, ಪೌಷ್ಟಿಕ ಆಹಾರದ ಚೀಟಿ ಹೀಗೆ ಮೊದಲಾದ ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ. ಇವರು ಹಿಂದೆ ಕೈಗೊಳ್ಳುತ್ತಿದ್ದ ಕುಂಬ್ರಿ ಬೇಸಾಯದ ಪದ್ಧತಿಯು ಕಣ್ಮರೆಯಾಗಿದೆ. ಭೂಮಿ ಇದ್ದರೂ ಕೂಡ ಹೊರಗೆ ಕೂಲಿ ಕೆಲಸಕ್ಕೆ ಹೋಗುವವರ ಸಂಖ್ಯೆಯು ಗಣನೀಯವಾಗಿ ಇರುವುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಬೆಟ್ಟಕುರುಬ ಮಹಿಳೆಯರು ಸಬಲೀಕರಣದತ್ತ ಇಂದು ಸಾಗಲು ಅನೇಕ ಅಡ್ಡಿ–ಆತಂಕಗಳನ್ನು ಎದುರಿಸುತ್ತಿದ್ದಾರೆ. ಕುಟುಂಬದಲ್ಲಿ ಹಾಗೂ ತಮ್ಮ ಸಮುದಾಯದ ಹಿತದೃಷ್ಟಿಯಿಂದ ನೋಡಿದಾಗ ಮಹಿಳೆಯರು ಪುರುಷರಷ್ಟೆ ಸಮಾನ ಪಾತ್ರಗಳನ್ನು ನಿರ್ವಹಿಸುತ್ತಾರೆ. ಮಹಿಳೆಯರಲ್ಲಿ ಕುಟುಂಬದ ನಿರ್ವಹಣೆ ಜವಬ್ದಾರಿ, ತೀರ್ಮಾನ ತೆಗೆದುಕೊಳ್ಳುವ ಅಧಿಕಾರಗಳು ಕಂಡು ಬಂದಿದ್ದು, ಹೊರಗಿನ ಸಾರ್ವಜನಿಕ ಕ್ಷೇತ್ರವು ಬೆಟ್ಟಕುರುಬ ಮಹಿಳೆಯರಿಗೆ ಅನೌಪಚಾರಿಕವಾಗಿ ನಿಷಿದ್ಧವಾಗಿರುವ ಸಂದರ್ಭದಲ್ಲಿ ಸಾರ್ವಜನಿಕ ಆಸ್ತಿ, ಭೌತಿಕ ಸಂಪನ್ಮೂಲಗಳು, ಸಂಸ್ಥೆಗಳ ಅಧಿಕಾರ ಸ್ಥಾನ, ರಾಜಕೀಯ ಅಧಿಕಾರ

ಮುಂತಾದವುಗಳು ಮಹಿಳೆಯರಿಂದ ದೂರವಾಗಿ ಇನ್ನಿತರೆ ಜನಾಂಗದ ಪುರುಷರ ಕೈ ಸೇರಿವೆ.

**ಪರಾಮರ್ಶನ ಗ್ರಂಥಗಳು**


- ಭಟ್, ಹೆಚ್.ಕೆ. ಮತ್ತು ಶ್ರೀನಿವಾಸ, ಬಿ.ಎಂ. (2010). *ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ಬುಡಕಟ್ಟು ಜನರ ಮರುವಸತಿ ಕಾರ್ಯಕ್ರಮ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಬೋರಲಿಂಗಯ್ಯ, ಹಿ. ಚಿ. (2011). *ಒಂದು ಬುಡಕಟ್ಟಿನ ಲೋಕದೃಷ್ಟಿ.* ಪ್ರಗತಿ ಗ್ರಾಫಿಕ್ಸ್,
- ಬೋರಲಿಂಗಯ್ಯ, ಹಿ.ಚಿ. (2006). *ಗಿರಿಜನ ನಾಡಿಗೆ ಪಯಣ.* ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- ಮಧು ಗುಂಡ್ಲುಪೇಟೆ. (2009). *ಬಂಡೀಪುರ ಅರಣ್ಯದಲ್ಲಿರುವ ಬೆಟ್ಟ(ಕಾಡು) ಕುರುಬರ ಸಂಸ್ಕೃತಿ: ಅಧ್ಯಯನ.* ಚಾಮರ ಪ್ರಕಾಶನ.
- ಮಧು ಗುಂಡ್ಲುಪೇಟೆ. (2002). ಕರ್ನಾಟಕ ಬುಡಕಟ್ಟು ಜನಾಂಗಗಳ ಅಭಿವೃದ್ಧಿ. ಅಕ್ಷತ ಪ್ರಕಾಶನ.
- ಮಧು ಗುಂಡ್ಲುಪೇಟೆ, ಅನ್ನಪೂರ್ಣ.ಎಂ, ಮಂಜುನಾಥ ಬಿ.ಆರ್. (2017). *ಕರ್ನಾಟಕ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ.* ಪ್ರಜಾವಿಕಾಶ ಸೇವಾ ಸಂಸ್ಥೆ.
- ಮಹದೇವಯ್ಯ ವಿ.ಎನ್. (2007). *ಹೆಗ್ಗಡದೇವನಕೋಟೆ ತಾಲ್ಲೂಕು ಆದಿವಾಸಿ ಬಾಲಕಾರ್ಮಿಕರು : ಒಂದು ಮಾನವಶಾಸ್ತ್ರೀಯ ಅಧ್ಯಯನ.* ಮೈಸೂರು ವಿಶ್ವವಿದ್ಯಾನಿಲಯ.
- ಮಹಾನಂದಾ ಗೊಂದಿ. (2010). *ಪರಿವರ್ತನೆ ಹಾದಿಯಲ್ಲಿ ಬುಡಕಟ್ಟುಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಮಂಜುನಾಥ, ಬಿ. ಆರ್. (2014). *ಬುಡಕಟ್ಟು ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳು: ಒಂದು ಮಾನವಶಾಸ್ತ್ರೀಯ ಅಧ್ಯಯನ.* (ಅಪ್ರಕಟಿತ ಪ್ರಬಂಧ) ಮೈಸೂರು ವಿಶ್ವವಿದ್ಯಾನಿಲಯ.
- ಮುಜಾಫ್ಫರ್ ಅಸ್ಸಾದಿ. (2011). ಬುಡಕಟ್ಟು ಜನಾಂಗದ ಅತಂತ್ರ ಸ್ಥಳಾಂತರ. ಅರುಹು ಕುರುಹು,
- ಮೈತ್ರಿ.ಕೆ.ಎಂ. (2002). *ಬುಡಕಟ್ಟು ಕುಲಕಸುಬುಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಪಾರ್ವತಮ್ಮ, ಸಿ. (2001). *ಮೀಸಲಾತಿ ಒಂದು ಗಗನ ಕುಸುಮ.* (ಅನು, ಅನಂತರಾಮಯ್ಯ. ಆರ್.ಎಲ್). ಡೀಡ್ ಸಂಸ್ಥೆ.